


ಸಂಪುಟ ೫ | ಜನವರಿ ೧೯೪೭ | ಸಂಚಿಕೆ ೧೦

ಕುಹಕಿಡಿಗಳು

—o—

ಸರಕಾರದವರು ಮಾಡುತ್ತಿರುವ ಅನ್ಯಾಯ, ಅಕ್ರಮ, ಅಪರಾಧ, ಇವುಗಳನ್ನೆಲ್ಲಾ ಪೇಪರಿನಲ್ಲಿ ನೋಡಿದರೆ—

—ನೆಟ್ಟಗೆ ಪೋಲೀಸಿನವರ ಹತ್ತಿರ ಹೋಗಿ ಸರಕಾರದ ಮೇಲೆ ದೂರು ಹೇಳೋಣವೇ ಎನ್ನಿಸುತ್ತದೆಯಂತೆ—ಒಬ್ಬ ವಾಚಕರಿಗೆ.

* * *

ಪಕ್ಕ ಪಕ್ಕದಲ್ಲಿ ಪ್ರಕಟವಾದ ಸುದ್ದಿಗಳು.

"ಜಪಾನಿನಲ್ಲಿ ಭಯಂಕರ ಭೂಕಂಪವಾಯ್ತು"

"ಭಾರತಕ್ಕೆ ಜಿನ್ನಾರವರು ಹಿಂತಿರುಗಿದರು"

—ಅಲ್ಲಾ ಒಂದೊಂಕೊಂದಕ್ಕೆ ಏನಾದರೂ ಸಂಬಂಧವಿದೆಯೇ ?

* * *

ನಮಗೇನೂ "ಪದವಿ ಹುದ್ದೆಯ ಆಸೆ ಇಲ್ಲ, ಜನಸೇವೆಯೇ ನಮ್ಮ ಧ್ಯೇಯ" ಕಾಂಗ್ರೇಸ್ ಮುಖಂಡರ ಭಾಷಣದಿಂದ--

—ಅದಕ್ಕಾಗಿಯೇ ಇರಬೇಕು, ಈಗಿನ ಮಂತ್ರಿಮಂಡಳವು ತನ್ನ ಕೆಲಸದಲ್ಲಿ ಮುಂದುವರೆಯುತ್ತಿರುವುದು.

* * * *

ಉರಿಗಾಳು

—— ೧ ——

" ಬಿಳಿಯುವರ ಪ್ರಾಮುಖ್ಯತೆ ಹೋಗುತ್ತಲಿದೆ, ಕರಿಯುವರ ಪ್ರಾಮುಖ್ಯತೆ ಪ್ರಪಂಚದಲ್ಲಿ ಹೆಚ್ಚುತ್ತಾ ಇದೆ " (ಸ್ಮಟ್ಸ್ ದಂಡನಾಯಕ) ..ಹಾಗಾದರೆ ಇನ್ನು ಮೇಲೆ ನಮ್ಮ ಜನ ಮುಖಕ್ಕೆ ಪೌಡರ್ ಹಚ್ಚುವುದನ್ನು ಬಿಟ್ಟುಬಿಡುತ್ತಾರೆ.

* * *

" ಕಂಬೈನ್‌ಡ್ ಆಸ್ಪತ್ರೆ ಮತ್ತು ಪಶುವೈದ್ಯಶಾಲೆಯ ಪ್ರಾರಂಭೋತ್ಸವ " (ಪತ್ರಿಕೆ)........ಅಪ್ಪಿತಪ್ಪಿ, ಅದಲುಬದಲಾದರೆ, ರೋಗಿ ಗತಿ ಏನು?, ಸ್ವಾಮಿ!

* * *

" ಹಿಂದೂ ಸಾಮ್ರಾಜ್ಯದಿಂದ, ಈಜಿಪ್ಟ್ ಮುಂತಾದ ದೇಶಗಳಿಗೆ ಮುಂದೆ ಅಪಾರ ಹಾನಿ ಉಂಟಾಗುತ್ತದೆ " (ಜಿನ್ನಾ) .. .. ಇಂಡಿಯಾದೇಶಕ್ಕೂ, ಈಜಿಪ್ಟಿಗೂ, ಮಧ್ಯೆ ಅರಬ್ಬಿ ಸಮುದ್ರವೇ ಇದೆಯಲ್ಲಾ? ಅದು ಬತ್ತಿಹೋದ ಮೇಲೆ ತಾನೆ?

* * *

" ಅನೇಕ ಕ್ರಿಮಿಕೀಟಗಳನ್ನು ಹಲವು ವಿಷದಿಂದ ಮಾನವನ ಆಹಾರ ಸತ್ವಪದಾರ್ಥಗಳನ್ನಾಗಿ ತಯಾರಿಸಿದಾರೆ " (ತಾತಾ ವಿಜ್ಞಾನಮಂದಿರದಲ್ಲಿ ಪ್ರದರ್ಶನದ ವರದಿ) . .ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಇದರ ಮಾತೇ ಇಲ್ಲ

* * *

" ನೋಬಲ್ ಬಹುಮಾನವನ್ನು ಗಳಿಸುವಷ್ಟು ಬುದ್ಧಿವಂತರು ನಮ್ಮಲ್ಲಿ ಇನ್ನೂ ಅನೇಕರಿದಾರೆ " (ಭಾಷಣ) ಅವಕಾಶಕೊಟ್ಟರೆ, ಪ್ರೋತ್ಸಾಹ ಸಿಕ್ಕರೆ, ಅವರು ಬೆಳಕಿಗೆ ಬರುತ್ತಾರೆ.

* *

ಪಾಕಿಸ್ತಾನದಲ್ಲಿ, ಎಲ್ಲ ಹರಿಜನರಿಗೂ, ಮಂತ್ರಿಪದವಿ ಕೊಡಲಾಗುವುದೆಂದು ಶ್ರೀ ಜೋಗೇಂದ್ರನಾಥಮಂಡಲರಿಗೆ ಜಿನ್ನಾರವರು ಭರವಸೆ ಕೊಟ್ಟಿಲ್ಲವಂತೆ.

* * *

"ಕೇವಲ 45 ನಿಮಿಷಗಳಲ್ಲೇ ಸರ್ಕಾರದವರ 5 ಬಿಲ್ಲುಗಳು ಪಾಸಾದುವು!"..................ಬಾಣ ಬಿಡುವವರು ಇರಲಿಲ್ಲವೋ, ಏನೊ?

* * * *

"ರಷ್ಯಾದಲ್ಲಿ ಮಹಾಕವಿ ಟಾಗೂರ್‌ರವರನ್ನು ಕೊಂಡಾಡಿದರು (ಸೋವಿಯಟ್ ಪತ್ರಿಕೆ) .....ಹಾಗಾದರೆ, ಟಾಗೂರ್‌ರವರು ಪ್ರಗತಿಶೀಲಸಾಹಿತಿಯೇ.

* * * *

"ಮಿ|| ಬ್ಲೂಂರವರು ತಮ್ಮ ಮಂಡಲದ ಮಂತ್ರಿಗಳಿಗಾಗಿ ಪ್ಯಾರಿಸ್ಸಿನಲ್ಲೆಲ್ಲ ಅನೇಕರನ್ನು ಭೇಟಿಮಾಡುತ್ತಿದ್ದಾರೆ" (ಸುದ್ದಿ)........ಅವರು ಬೆಂಗಳೂರಿಗೆ ಬಂದುಬಿಟ್ಟರೆ, ಅನಾಹುತವಾಗುವುದಲ್ಲಾ!

* * * *

"ಇಂಡಿಯಾದೇಶದ ಭೂಭಾಗ, ವರ್ಷವರ್ಷವೂ, ಒಂದೊಂದು ಗೇಣಿನಷ್ಟು, ಉತ್ತರಕ್ಕೆ ಸರಿಯುತ್ತಿದೆ" (ಭೂ ಶಾಸ್ತ್ರಜ್ಞರ ಹೇಳಿಕೆ). ಆದ್ದರಿಂದಲೇ ಇರಬೇಕು, ಚರ್ಚಿಲ್‌ಗೆ ನಮ್ಮಮೇಲೆ, ಅಷ್ಟು ಕೋಪ!

* * * *

"ಬಿರುದು ಬಾವಲಿಗಳಿಗೆ" ಎಂದು ನಾವು ಹೋದವಾರ ಅಚ್ಚುಹಾಕಿದ್ದನ್ನು ವಾಚಕರು "ಬಾವಲಿಗಳಿಗೆ ಬಿರುದು" ಅಂದು ತಿದ್ದಿ ಓದಿಕೊಳ್ಳಬೇಕಾಗಿ ಪ್ರಾರ್ಥನೆ (ಪತ್ರಿಕೆ) ....ಹೀಗೆ, ಪ್ರಾರ್ಥಿಸಿಕೊಳ್ಳಬೇಕಾಗಿಯೇ ಇಲ್ಲ.

* * * *

"ಈಚೆಗೆ ಅಚ್ಚಾಗುತ್ತಿರುವ ಅನೇಕ ಪುಸ್ತಕಗಳನ್ನು ನೋಡಿದರೆ, ಕಾಗದದ ಅಭಾವ ಸಂಪೂರ್ಣ ತೀರಿ ಹೋದ ಹಾಗೆ ಕಾಣುತ್ತದೆ" (ಪತ್ರಿಕೆ) ....ಆದರೂ ನಮಗೆ ತೃಪ್ತಿ ಇಲ್ಲ.

* * *

— — o ———

ಬೆಲ್ಲದ ಹತೋಟಿ ಆಜ್ಞೆ ಬಂದಾಗಿನಿಂದ ಊರಲ್ಲೆಲ್ಲಾ ಔಷಧೀಗೆ ಎಂದರೂ ಬೆಲ್ಲ ದೊರೆಯುವುದಿಲ್ಲವಂತೆ—

—ಅಂದರೆ ಈ ಬೆಲ್ಲದಬಾಯಿ ನವರ - ಗತಿ? ರಾಜಕೀಯದಲ್ಲಿ,

* * *

ಕಾಲೇಜ್ ಹಬ್ಬ

ಬರಗಾಲದಲ್ಲಿ ಹಬ್ಬ ಎಂದರೆ ಸಂಭ್ರಮ ಕೇಳಬೇಕೆ ? ಎಲ್ಲರೂ ಕೈಹಾಕಿ ಹಿರಿಯ ಹಬ್ಬ ನಡೆಸಿಯೇ ಬಿಡಬೇಕು ಎಂದು ತೀರ್ಮಾನ ಮಾಡಿದೆವು. ಇದೇ ಕಾಲೇಜಿನಲ್ಲಿ ಓದಿ, ನಂತರ ಸಮಾಜದಲ್ಲಿ ಗಣ್ಯವ್ಯಕ್ತಿಗಳಾದವರೆಲ್ಲರೂ ಬರುತ್ತಾರೆ. ಅವರ ಸಂಪರ್ಕದಿಂದ ನಾವೂ 'ಕುಮ್ಮಕ್ಕು' ಪಡೆಯಬಹುದು ಎಂಬ ಆಶೆ. ಹಿಂದಿನ ವಾರವೆಲ್ಲಾ ಎಕ್ಸಿಬಿಷನ್‌ಗಾಗಿ ಕಷ್ಟಪಟ್ಟೆ. ಅಂದು ಬೆಳಿಗ್ಗೆ ಎಲ್ಲಾ ಸಭಾಮಂಟಪದ ಉಸ್ತುವಾರಿ ನೋಡಿದೆ.

ಊಟಕ್ಕೆ ಮನೆಗೆ ಹೋದರೆ, ಮಜ್ಜಿಗೆ ಅನ್ನದ ಹೊತ್ತಿಗೆ ಯಾಕೋ ಬೆನ್ನಲ್ಲಿ ಛಳಿ ಛಳಿ ಕಂಡು ಬಂತು, ಪರೀಕ್ಷಕರನ್ನು ಕಂಡಹಾಗೆ ಆಯಿತು. ಇದ್ಯಾಕೆ ಈವತ್ತು ಹೀಗೆ ಎಂದುಕೊಳ್ಳುವಷ್ಟರಲ್ಲೇ ತಲೆಯೆಲ್ಲಾ ಭಾರವಾಯಿತು. ಆದಿಶೇಷನ ತಲೆಯಂತೆ ತೋರಿತು. ಕೈಕಾಲೆಲ್ಲಾ ಸಿಡಿಯಲಾರಂಭಿಸಿತು. ಬಂದೇಬಂತು ಕೆಂಡಾಮಂಡಲ ಜ್ವರ—

ಆಯಿತಪ್ಪಾ! ಈ ವರ್ಷದ ಕಾಲೇಜ್ "ಡೆ" ಎಂದು ಮಲಗಿದೆ ಮಧ್ಯಾಹ್ನ ಎರಡು ಗಂಟೆ ಹೊತ್ತಿಗೆ.

* * *

ಸಾಯಂಕಾಲ ಆರರ ಗಂಟೆ, ಠಾಕೋಠಾಕು. ಸಾಗೋಲಿ ಸೂಟು ಹಾಕಿದ ಹಿರಿಯ ಹುಡುಗರೆಲ್ಲಾ ಹಾಜರು. ಗಾಂಧೀ ಮುಂಡು, ನೆಹ್ರೂ ಶಿರು ವಾಲು, ಅಜಾದ್ ಟೋಪಿ, ಜಿನ್ನಾ ಅಂಗಿ, ಜೈಪ್ರಕಾಶ್ ಕಿಸೆ ಅಂಗಿ, ಹಾಕಿದ ಕಿರಿಯರೆಲ್ಲಾ ಸಿದ್ಧ.

ಒಂದೇ ಕೂಗು 'ಜೈ ಹಿಂದ್' ಎಲ್ಲರ ಕೊರಲಲ್ಲೂ ಅದೇ!

ಸಭೆಯು ಆರಂಭವಾಗಿಯೇ ಬಿಡ್ತು—ಕಿಕ್ಕಿರಿದಿತ್ತು.

ಕಾಲೇಜಿನ ಹಿರಿಯ ಹುಡುಗ ಅಧ್ಯಕ್ಷ—ಅಮೋಘವಾದ ಭಾಷಣವನ್ನು ಮಾಡಿದ. ಆತ ಕಾಲೇಜಿನಲ್ಲಿ ಓದುತ್ತಿದ್ದಾಗ ಪರೀಕ್ಷೆಯಲ್ಲಿ ಆತನೇ ಶೇಕಡ ೮೨ ನಂಬರು ತೆಗೆದು ಮೊದಲಿಗನಾಗಿದ್ದನಂತೆ— ನನ್ನ ಪಕ್ಕದಲ್ಲಿದ್ದವನನ್ನು ಕೇಳಿದೆ—'ಯಾರ್ರೀ ಅದು' ಈಗೇನುಮಾಡುತ್ತಿದ್ದಾರೆ ಎಂದು.

'ಅಧ್ಯಕ್ಷರೇ ? ಅವರು ೧೯೦೦ರ ಪರೀಕ್ಷೆಯಲ್ಲಿ ರೆಕಾರ್ಡ್ ನಂಬರು ತೆಗೆದೋರು, ಈಗ ಕಂಟ್ರೋಲರ ಆಫೀಸಿನಲ್ಲಿ ಹೆಡ್ ಅಕೌಂಟೆಂಟ್ ಆಗಿದ್ದಾರೆ —ಅದು ಯಾವುದೋ ಸೆಕ್ಷನ್‌ನಲ್ಲಿ' ಎಂದ ನೆರೆಯಾತ.

ಅನಂತರ ಕಾಲೇಜಿನ ಪ್ರಾಧ್ಯಾಪಕರು ಸೂಕ್ತರೀತಿಯಲ್ಲಿ ಮರುತ್ತರ ಕೊಟ್ಟು—“ ನಮ್ಮ ಕಾಲೇಜಿನಲ್ಲಿ ಉತ್ತಮ ರೀತಿಯಿಂದ ಪದವೀಧರರಾದವರು ಹೇಗೆ ನಮ್ಮ ಸಮಾಜದ ಬೆನ್ನುಮೂಳೆಯಾಗಿದ್ದಾರೆ ಎನ್ನುವುದಕ್ಕೆ ನಮ್ಮ ಅಧ್ಯಕ್ಷರೇ ಸಾಕ್ಷಿ ” ಎಂದು ನುಡಿದರು.

ನಂತರ ಕಾಲೇಜಿನ ಅಧ್ಯಾಪಕರೊಬ್ಬರು ಹಿರಿಯ ಹುಡುಗರ—ಮಾಜಿ ಹುಡುಗರ — ಶುಭಾಶಯಗಳನ್ನು ಕೋರಲು ಎದ್ದುನಿಂತು ಅಮೋಘವಾದ ಭಾಷಣಮಾಡಿದರು—“ ನೀವುಗಳೆಲ್ಲರೂ ನಡೆದ ಹಾದಿಯಲ್ಲೇ ನಮ್ಮ ಹುಡುಗರೂ ನಡೆಯುತ್ತಿದ್ದಾರೆ. ನೀವು ಹಾಕಿಕೊಟ್ಟ ಮೇಲ್ಪಂಜ್ಞ್ತಿಯನ್ನೇ ಸ್ವಲ್ಪ ಅತಿಕ್ರಮಿಸಿ ನಡೆಯುತ್ತಿದ್ದಾರೆ—ನಿಮ್ಮಲ್ಲಿ ಹಲವಾರು ಜನರು ಸರ್ಕಾರಿ ನೌಕರಿಗೆ ಸೇರಿದರೆ, ನಮ್ಮ ಹುಡುಗರಲ್ಲಿ ಹಲವಾರು ಜನ, ಅಂಗಡಿಗಳಲ್ಲಿ ನೌಕರಿಗೆ ಸೇರುತ್ತಿದ್ದಾರೆ ” ಇತ್ಯಾದಿ, ಇತ್ಯಾದಿ.

ಹಳೆಯ ಹಿರಿಯ ಹುಡುಗರ ಪರವಾಗಿ ೧೯೧೦ ರಲ್ಲಿ ಮೊದಲನೇ ರಾಂಕ್ ಪಡೆದು ೧೯೦೦ರ ಶೇಕಡಾ ೮೦ನ್ನು ಮುರಿದು ಹಾಕಿದ ಶ್ರೀ. . . . .ರು. ಅತ್ಯಮೋಘ ಭಾಷಣಮಾಡಿದರು ಅವರ ವಾಕ್ಚಾತುರ್ಯ ಕಂಡು ನಾನು ತಲೆದೂಗಿದೆ—ಪಕ್ಕದಲ್ಲಿದ್ದವನನ್ನು ಕೇಳಿದೆ. ‘ ಆತ ಯಾರ್‍ರೀ ’ ಏನುಮಾಡುತ್ತಿದ್ದಾರೆ ‘ ಎಂದು.

ಆತ ಹೇಳಿದ ‘ ಅವರೇ, ಗಣಿತಶಾಸ್ತ್ರದಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿ, ಶಹಲ್‌ವರೆಗೂ ‘ ರೆಕಾರ್ಡ್ ’ ಸ್ಥಾಪಿಸಿದವರು. ಈಗ ನೇಂದೀ ಲಕ್ಷ್ಮಣ್‌ಸೇಠ್ ಅಂಗಡಿಯಲ್ಲಿ ಲೆಕ್ಕಾ ಬರೆಯುತ್ತಿದ್ದಾರಂತೆ ’ ಎಂದ.

ಸಮಕಾಲೀನ ಹುಡುಗರ ಪರವಾಗಿ ಹಿರಿಯರೊಬ್ಬರು ಶುಭಾಶಯಗಳನ್ನು ಕೋರಿದರು. “ ನಾವೂ ನೀವೂ ಎಲ್ಲಾ ಒಂದೇ. ಬೇಕಾದರೆ ಐನ್‌ಸ್ಟೀನನನ್ನು ಕೇಳಿ. ಪರಸ್ಪರ ತೋರ್ಪಡುವ ಮಾಯಾ ವ್ಯತ್ಯಾಸವೆಲ್ಲಾ ‘ ಕಾಲ ’ದ ಮೇಲೆ ಅವಲಂಬಿಸಿರುವುದು ಅಷ್ಟೇ, ನೀವೆಲ್ಲಾ ಪ್ರಗತಿಪರ ಲೋಕದಲ್ಲಿ ಕಾಲಿಡುತ್ತಿರುವಿರಿ. ಭಾವೀ ಸಮಾಜದ ಭೆನ್ನುಮೂಳೆಯಂತಿರುವಿರಿ ಮುಂಧಿನ ಲೋಕದ ಮುಂಧಾಳುಗಳಾಗುವಿರಿ ” ಎಂದು ಅಲ್ಪಪ್ರಾಣಗಳನ್ನೆಲ್ಲಾ ಹಿರಿಮೆಯ ಮಹಾಪ್ರಾಣಗಳನ್ನಾಗಿ ಮಾಡಿ ಝೋರಿನ ಭಾಷಣವನ್ನು ಮಾಥಿಯೇ ಭಿಟ್ಟರು.

“ ಇವರು ಯಾರ್‍ರೀ ಏನುಮಾಡುತ್ತಾರೆ ಜೀನನಕ್ಕೆ ’ ಎಂದೆ ನೆರೆಯವ ಹೇಳಿದ—‘ ಇವರೇ ? ಇವರು ೧೯೩೦ ರಲ್ಲಿ ಸಸ್ಯಶಾಸ್ತ್ರದಲ್ಲಿ ಹಿಂದೆಂದೂ ಯಾರೂ ಪಡೆಯದಷ್ಟು ನಂಬರು ಪಡೆದು ಇದ್ದ ಬದ್ದ ಮೆಡಲುಗಳನ್ನೆಲ್ಲಾ ಹಾರಿಸಿಕೊಂಡು

ಹೋದವರು ಈಗ ಯಾವುದೋ ಪ್ರೌಢಪಾಠಶಾಲೆಯಲ್ಲಿ ೬೦ ರೂಪಾಯಿಗೆ ಪಾಠ ಹೇಳಿಕೊಡುತ್ತಿದ್ದಾರೆ ' ಎಂದು

ಅಷ್ಟರಲ್ಲೇ ಒಂದು ಪಿಲ್ಟು, ಒಂದು ಮರಿ, ಎದ್ದು ನಿಂತು, ಕಾಲೇಜ್ ಹುಡುಗರಪರವಾಗಿ ವಂದನೆಗಳನ್ನು ಅರ್ಪಿಸಿದ. ಏನು ಚೆನ್ನಾಗಿ ಸ್ಫುಟವಾಗಿ ಹಾಸ್ಯಮಿಶ್ರವಾಗಿ ಮಾತನಾಡಿದ ಎನ್ನುತ್ತೀರಿ. ಹತ್ತಿರ ಹೋಗಿ ಕೈಕುಲಿಕಿ, '' ಮಗೂ ಚೆನ್ನಾಗಿ ಬಾಳು '' ಎಂದು ತಲೆ ಸವರೋಣವೇ ಎನ್ನಿಸಿತು ಆದರೆ ಬುದ್ಧಿ ಸಹಾಯಕ್ಕೆ ಬಂದು, ಕುಳಿತಲ್ಲಿಯೇ ಕುಳ್ಳಿರಿಸಿತು.

' ಈ ಹುಡುಗ ಯಾರ್ರೀ, ಛಲೋ ಹುಡುಗ ಇದ್ದಾನೆ ' ಎಂದೆ ಸರ್ವಜ್ಞ ನೆರೆಯವನು—ಹೇಳಿದ— ' ಅವನೇ ಭೌತಿಕಶಾಸ್ತ್ರದ ತರಗತಿಯಲ್ಲಿ ಅವನೇ ಮೊದಲಿಗ. ಬಲು ಚೂಟಿ, ವಾಗ್ಮಿ ಎಂದ. ' ಯಾರ ಮಗನೋ ' ಎಂದೆ—

'' ಅನಾಥಾಲಯದಲ್ಲಿ ಓದುತ್ತಿದ್ದಾನಂತೆ ' ಎಂದು ಮರುತ್ತರ

' ಯಾವ ಅಂಗಡೀ ಲೆಕ್ಕ ಇವನು ಬರೆಯುತ್ತಾನೋ ' ಎಂದುಕೊಂಡೆ

ಅಷ್ಟರಲ್ಲಿ - ವಂದೇಮಾತರಂ ' ಗೀತೆ, ರಾಷ್ಟ್ರೀಯ ಹಾಡಿನೊಂದಿಗೆ, ಸಭೆ ಮುಕ್ತಾಯವಾಗುತ್ತಾ ಇತ್ತು

ಆದರೆ ನನ್ನ ಚಪಲ ತೀರಿತ್ತಿಲ್ಲ. ನನ್ನ ನೆರೆಯವನನ್ನು ಕೈಹಿಡಿದೆ ಭದ್ರ ವಾಗಿ ' ಏನಯ್ಯಾ? ಇದು, ಈ ಕಾಲೇಜಿನಿಂದ ಪಾಸಾದವರು ಯಾರೂ ದೊಡ್ಡ ಪದವಿಗೆ ಬಂದೇ ಇಲ್ಲವೇ? ಯಾರೂ ಸಮಾಜದಲ್ಲಿ ಗಣ್ಯರಾಗಿಯೇ ಇಲ್ಲವೇ? ಕಂಟ್ರೋಲರ ಆಫೀಸು ನೌಕರ, ಸೇಂದಿ ಲಕ್ಷಣಶೇರಿನ ಮುತ್ಸದ್ದಿ, ಹಾಯಿಸ್ಕೂಲ ಅಧ್ಯಾಪಕ, ಇಷ್ಟೇನೆ? ಎಂದೆ—

ಆತ ಹೇಳಿದ - '' ಬೇಕಾದಷ್ಟು ಜನ ದೊಡ್ಡ ಪದವಿಗೆ ಬಂದಿದ್ದಾರೆ—ನಾಕಷ್ಟು ಜನ ಸಮಾಜದಲ್ಲಿ ಮೊದಲಿಗರಾಗಿದ್ದಾರೆ—ಒಂದಿಷ್ಟು ಜನ ಹಿರಿಯ ಅಧಿಕಾರಿಗಳೂ ಆಗಿದ್ದಾರೆ - ಒಂದಷ್ಟು ಜನ ಬೇರೆ ದೇಶಗಳಿಗೆ ಹೋಗಿ ನಮ್ಮ ಕಾಲೇಜಿನ ಕೀರ್ತಿ ಪತಾಕೆಗಳನ್ನು ಮೊಳಗಿದ್ದಾರೆ—ಆದರೆ ಈ ಸಾರಿ ನಮ್ಮ ಕಾಲೇಜು ಹಬ್ಬದ ನಿರ್ವಾಹಕ ಸಮಿತಿಯಲ್ಲಿ ಒಂದು ಶಾಸನ ಏರ್ಪಡಿಸಿದರು. ಪ್ರತಿಯೊಂದು ದಶಕದಲ್ಲೂ ಯಾರು ಅತ್ಯುತ್ತಮ ನಂಬರ ತೆಗೆಯು ಮೊದಲಿಗರಾಗಿ ಉತ್ತೀರ್ಣರಾದರೋ ಅವರನ್ನೇ ಭಾಷಣಗಳಿಗೆ ಆಹ್ವಾನಿಸಬೇಕೆಂದು. ಅದಕ್ಕಾಗಿಯೇ ಈ ಜನರು ಆಯ್ಕೆ ಆಗಿದ್ದು ಹಾಗೆ ಶಾಸನ ಮಾಡದೇ ಇದ್ದರೆ, ವಿಶ್ವವಿದ್ಯಾಲಯದ ರಿಜಿಸ್ಟ್ರಾರರ ಹೆಸರಮೇಲೆಯೇ ಉತ್ತೀರ್ಣ ಪಟ್ಟಿಯಲ್ಲಿ ಹೆಸರಾಂತರಾದವರನ್ನು ಆಯ್ಕೆಮಾಡಿದ್ದರೆ—ಎಂತೆಂತಹ ದಿಗ್ಗಂತಿಗಳನ್ನೆಲ್ಲಾ ಕರೆದು ಭಾಷಣ ಮಾಡಿಸಬಹುದಾಗಿತ್ತು ಸರದಾರರು ಬಿರುದಾಂಕಿತರು, ಅಖಂಡ

ದೇಶದ ಮುಖಂಡರು, ವಿತಂಡಾವಾದದ ಶಿಖಂಡಿಗಳು, ನರವಾಹನನ ಕುಲ ದೀಪಕರು, ಸೆರೆಸದನದ ವ್ಯವಸ್ಥಾಪಕರು, ಎಷ್ಟೆಷ್ಟೋಜನರು ಇರುವರು, ಆದರೆ ಕಾರ್ಯನಿರ್ವಾಹಕ ಸಮಿತಿಯಲ್ಲಿ ಈ ಶಾಸನ ಅನುಮೋದಿಸಲ್ಪಟ್ಟಿತು ಹಾಗಾಗಿ ಪರೀಕ್ಷೆಯಲ್ಲಿ ಮೊದಲಿನನನ್ನೇ ಆಯ್ಕೆಮಾಡಿದರು ''

ನನಗೆ ತಲೆ ಗಿರ್ರೆಂದಿತು. ನಂಬರು ತೆಗೆದುಕೊಂಡು ಪಾಸುಮಾಡಿದರೂ ಜನಜೀವನದಲ್ಲಿ ಸಮಾಜದಲ್ಲಿ ಅಷ್ಟೇನೆ, ಎನ್ನುವ ಯೋಚನೆ ತಲೆತಿರುಗಿಸು ತ್ತಿತ್ತು.

ಅಯ್ಯೋ ! ಅಯ್ಯೋ ! ಎಂದೆ.

* * *

ಯಾಕೋ ಸೂರು ! ಹೀಗೇಕೆ ಕನವರಿಸಿಕೊಳ್ಳುತ್ತೀ ! ಏನಾದರೂ ಕೆಟ್ಟ ಕನಸು ಬಿತ್ತೇನಪ್ಪಾ ಎಂದು ನಮ್ಮಮ್ಮ ಶೈತ್ಯೋಪಚಾರ ಮಾಡುತ್ತಿದ್ದರು,— ತಲೆಗೆ ಒದ್ದೇಬಟ್ಟೆ ಹಾಕಿ ಆಗಲೇ ನನಗೆ ಎಚ್ಚರವಾಗಿದ್ದು, ಮೈಯೆಲ್ಲಾ ಬೆವರುತ್ತಿತ್ತು. ಆಗತಾನೇ ಜ್ವರ ಬಿಡುತ್ತಿತ್ತು - ಘಂಟೆ ಎಂಟಾಗಿತ್ತು - ನನಸಿನಲ್ಲಿ ಕಾಣಬೇಕಾದ ಕಾಲೇಜ್‌ಡೇ - ಕನಸಿನ ಕನವರಿಕೆಯಲ್ಲಿ ಕಾಣುವುದೂ ಒಂದು ವಿಶೇಷವೇ ?

—ಅದೂ ಭಾಷಣಗಳೆಲ್ಲಾ ಕನ್ನಡದಲ್ಲಿ ಆಗುವುದೂ, ವಿಶೇಷವಲ್ಲವೇ ? ಕನ್ನಡನಾಡಿನ ಹಿರಿಯೂರಿನಲ್ಲಿ—


—ಸೂರ್ಯನಾರಾಯಣ

ಕೊಕ್ಕರೆಯ ದನಿಯಾಕೆ

ಕಿತ್ತು ಬಾಡಿಸಿದ ಮೈಸೂರು ಮಲ್ಲಿಗೆ

ಹಸಿವಿನಲಿ ಬಡಿದಾಗ ಬಾಗಿಲನು ತೆರೆವಾಕೆ
'ಹಸಿ[illegible]ಸು ?' ಎನುವಾಕೆ ಮನೆಯೊಳಿಲ್ಲ.
ಬಿಸಿಲೇರೆ ಪ[illegible]ಳೆ ಬಿಕ್ಕುತಲಿ ಅಳುವಾಕೆ
ಹರುಕು [illegible]ಸದಾಕೆ ಮನೆಯೊಳಿಲ್ಲ
ಕೊಕ್ಕರೆಯ ದನಿಯಾಕೆ ಬಿಕ್ಕಲಿನ ನುಡಿಯಾಕೆ
ಸಿಕ್ಕಿದರು ಬಿಡುವಾಕೆ ಮನೆಯೊಳಿಲ್ಲ
ಚಿಕ್ಕ ಮನೆಯೊಳಗೆನ್ನ ಕುಕ್ಕುತಲಿ ಜರಿವಾಕೆ
ಉಕ್ಕಿನೊಲ್ಮೆಯ ಮಡದಿ ಮನೆಯೊಳಿಲ್ಲ.

—ವೆಂ. ಶಾ.



ಪಾಕಿಸ್ತಾನ್ ಮಗ — ' ಇಲ್ಲಿಂದ ನಾನೂ ಬಿಡಿಸಿ ಕಾರ್ನ ... "

ಅಪರಂಜಿ ದೇವಿ

ನೂರರ ಮೇಲಿನ್ನೂರ ಹೇರಿದರೇನು, ಜುಲ್ಮಾನೆಯ ನೆಪದಲಿ? ಸುಮ್ಮನೆ ಬಿಟ್ಟರೆ, ಬೆಲೆಯನೇರಿಪರು ಗಗನಕ್ಕೆ! ಬೆಲೆಯ ನಿಶ್ಚೈಸಿದೊಡೆ, ಪಾತಾಳಕ್ಕಟ್ಟುವರು, ಪದಾರ್ಥಗಳ. ಕೊಂಬ ಮಂದಿಯು ಕಂಡರೆ ಇಲ್ಲೆಂಬರು; ತನ್ನ ತಿಂಬ ಮಂದಿಯು ಕಂಡರೆ ಕೋ ಎಂಬರು. ಕೈಗೆ ಕಾವ್ ಕೊಟ್ಟು! ಕರುಣೆಯೇ ಹೀನ! ಕಂಬನಿಯೇ ಶೂನ್ಯ! ಜರಿಪೇಟ, ಕರಿಪೇಟೆ! ಅಕಟಕಟಾ! ಜಿಗಣೆಯೇ ಗುರುವಾದನಲಾ! ಹಿತ್ತಲ ಕತ್ತಲಲಿ ಕದ್ದುವಾರುವ ಮುದ್ದುಮೋಹನ ಲಾಭಚೋರರ ಕಂಡರೆ, ಕೆಂಡವಾಗುವಳು, ನಮ್ಮ ಕೊರವಂಜಿ ಕಾಯುವ ಪರಂಜಿ ದೇವಿ.

* * *

ಕಾಯ ತಗ್ರನೆ ಕಂದಿದ್ದರೇನು? ಕಾಯ ಪಳಿಚ್ಚನೆ ಬಿಳಿಚಿದ್ದರೇನು?.... ಅಂತರಂಗ ನ್ಮಟ್ಸಾದ ಬಳಿಕ? ಕರಿಯುವರ ಕತ್ತಮೇಲೆ ಕುಳಿತಿರುವ, ಬಿಳಿಯುವರ ಬೆರಗುಗೊಳಿಸ, ಭೀಷಣ ಭಾಷಣಗಳ ಮಳೆಗರೆದರೇನು? ಮಾತುಗಾರ ಸ್ಮಟ್ಸಾದ ಬಳಿಕ? ಬಿಳಿಯ ತೊಗಲಿನ ಕೆಳಗಿನ ಕೆನ್ನೀರ, ಕರಿಯ ತೊಗಲಿನ ಕೆಳಗಿನ ಕೆನ್ನೀರ, ಹರಿಸಿಗೆಲಿದ, ವಿಜಯಮಾಲಿಕೆಯನು ಹೊತ್ತ ನ್ಮಟ್ಸಗೆ, ವಿಜಯಲಕ್ಷ್ಮಿಯೇ ಮಂಗಳಾರತಿಯ ಬೆಳಗಿದಳಲಾ! ..ಜರಿದಳು, ನಮ್ಮ ಕೊರವಂಜಿ ಕಾಯುವಪರಂಜಿ ದೇವಿ.

* * *

ಅಕಟಕಟ! ಮನೆಮನೆಗೆ ಜಗಳ. ಕುಲಕುಲಕೆ ಕುಹಕ, ಕೋಮು ಕೋಮಿಗೆ ಕೊಡಲಿ, ಗ್ರಾಮ ಗ್ರಾಮಕೆ ಸಂಗ್ರಾಮ, ನಾಡು ನಾಡಿಗೆ ಕೇಡು, ಗಡಿಯಾಚೆ - ಗಡಿ ಈಚೆ - ನಡಿಯಾಚೆ - ಬಡಿ - ಬಿಡಿ, ಪ್ರಾಂತ ಪ್ರಾಂತಕೆ ಬೆಂಕಿ, ದೇಶ ದೇಶಕೆ ನಾಶ, ದೇವ ದೇವಕೆ ದ್ವೇಷ! ಉಡಲಿಲ್ಲ, ಉಣಲಿಲ್ಲ, ತಿಳಿವಿಲ್ಲ, ತಳವಿಲ್ಲ, ಕೂಡಿ ಬಾಳುವ ಬುದ್ಧಿ ಎಂದುಬರುವುದೊ ಜನಕೆ, ಮರುಗಿದಳು, ನಮ್ಮ ಕೊರವಂಜಿ ಕಾಯುವಪರಂಜಿ ದೇವಿ.

* * *

ಒಪ್ಪಾದ ಬ್ಯಾಟೇಕೆ? ಮಫ್ಲರೇರಿಸಲೇಕೆ?
ಕಾರ್ಪಾಸ ಚಿಲ್ಲ ತನಗೇಕೆ? ಟೆನ್ನೀಸ
ಪೆಪ್ಪನರಿಯದಗೆ—ಸರ್ವಜ್ಞ.

ಕಿಕ್ಕಿರಿತ

ಸಿನಿಮ ಮಂದಿರ ಕಿಕ್ಕಿರಿದು ತುಂಬಿದೆ. ಆದರೂ, ಚಿತ್ರ ಚೆನ್ನಾಗಿದೆ, ಎಂದು ಹೇಳಲಾಗುವುದಿಲ್ಲ. ಏಕೆಂದರೆ, ಆ ಜನ ಅಲ್ಲಿಗೆ ಸಿನಿಮ ನೋಡುವುದಕ್ಕೆ ಅಂತ ಬಂದವರೇ ಅಲ್ಲ (1) ಹಲವರು ಬಿಟ್ಟಿ ನುಗ್ಗಿದವರು. ಅವರಿಗೆ ಅದೇ ಜಂಬ. ಎದುರು ಮನೆಯವರೆದುರು ಅದನ್ನೇ ಅವರು ಮೂರು ಹೊತ್ತೂ ಹೇಳಿಕೊಳ್ಳುತ್ತಾರೆ. 'ನಮಗೆ ಪಾಸಿದೆ: ನಾವು ಕಾಸು ಕೊಡಬೇಕಾಗಿಲ್ಲ', ಅಂತ· ಉಳಿದವರ ಹೊಟ್ಟೆ ಉರಿಸುವುದಕ್ಕಾಗಿಯೇ ಅವರು ಬಂದಿರುವುದು. ರೈಲಿನವರು, ಬಸ್‌ನವರು, ಟಪಾಲಿನವರು, ಡಂಗುರದವರು, ಅಚ್ಚುಕೂಟದವರು, ಚೀಟಿ ಅಂಟಿಸುವ ಹುಡುಗರು, ಅಂಟಿಸಿದ ಗೋಡೆಯ ಮನೆ ಮಾಲೀಕರು, ಪೋಲೀಸಿನವರ ಸಂಸಾರಗಳು, ಸಾನಿಟೆರಿಯವರು ...ಇತ್ಯಾದಿ ನೂರಾರು ಜನ, ಮಕ್ಕಳು, ಮರಿ, ಸೊಸೆ ಸಹಿತ....ಫ್ಯಾಮಿಲಿ ಪಾಸುಗಳು ಕಿಕ್ಕಿರಿದರೆ, ಚಿತ್ರ ಚೆನ್ನಾಗಿದೆ, ಅಂತಲೇ? (2) ಅನೇಕರು, ನವದಂಪತಿಗಳು, ಆ'ರಾಮ'ವಾಗಿ ಸೀತೆಸಮೇತ ಅಷ್ಟು ಹೊತ್ತು ಯಾರಿಗೂ ಕಾಣಿಸದೆ ಕತ್ತಲಲ್ಲಿ ಕೂಡಬಹುದಲ್ಲಾ ಎಂಬ ಆಸೆಯಿಂದ ಬಂದಿರುವವರು. (3) ಇನ್ನು ಕೆಲವರು, ಈ ನವದಂಪತಿಗಳನ್ನು ಕಂಡು ಕರುಬಿ ಕೊರಗುವವರು. ಅದಕ್ಕಾಗಿಯೇ ಬಂದಿರುವವರು. (4) ಅನೇಕ ಹುಡುಗರು, ತಮ್ಮ ಮೊತ್ತ ಮೊದಲನೆಯ ಬತ್ತಿ ಸೇವನೆಯನ್ನು ನಿರಾತಂಕವಾಗಿ ನೆರವೇರಿಸುವುದಕ್ಕಾಗಿ ಬಂದಿರುವವರು. ಅವರಿಗೆ ಆ ನವನಾಗರಿಕ ವಿದ್ಯೆಯನ್ನು ಕಲಿಸಲು ಅವರೇ ಹಣ ಕೊಟ್ಟು ಕರೆದುಕೊಂಡು ಬಂದಿರುವ ಅವರ ಗೆಳೆಯರು. .(5) ಮತ್ತೆ ಕೆಲವರು 'ಬಾಜಿ' ಬಾಜಿಸಿದವರು. ಅಂದರೆ, 'ಇವತ್ತು ಮೇಷ್ಟರು ರಜ ತೆಗೆದುಕೊಳ್ಳುತ್ತಾರೆ' ಎಂದು ಒಬ್ಬ ಅಂದಾಗ, ಮತ್ತೊಬ್ಬ, 'ಇಲ್ಲ! ಬಂದು ಬೊಗಳೇ ಬೊಗಳುತ್ತಾರೆ' ಎನ್ನುವುದು. ಆಗ ಮೊದಲಿನವನು, 'ರಜಾ ತೆಗೆದುಕೊಂಡರೆ,. ..ನೋತೆ.... ಅಂತ, ಸಿನಿಮಾಗೆ ಕರೆದುಕೊಂಡು ಹೋಗ್ತೀಯೋ' ಎಂದು ಬಾಜಿ ಕಟ್ಟುವುದು, ಆ ಬಾಜಿಗೆ ಬಂಧಕನಾಗಿ, ಇಬ್ಬರೂ ಸಂಜೆ ಕಿಕ್ಕಿರಿಯುವುದು....ಹೀಗೆ. 'ನಿನ್ನೆ ಸತ್ತಿದ್ದು ಇವರಲ್ಲ, ಇವರ ಅಣ್ಣ!' 'ನಾಳೆ ದಿವಸ ಹ್ಯಾಮಂಡ್ಸ್ ಗೆಲ್ಲುವುದೇ ಇಲ್ಲ' 'ಬಳೆಪೇಟೇಲಿ ಬಳೆ ಅಂಗಡೀನೆ ಇಲ್ಲ' ಇತ್ಯಾದಿ... ಜಗಳಗಳೆಲ್ಲ ಯುವಕ ಪ್ರಪಂಚದಲ್ಲಿ ಬಾಜಿಯಿಂದಲೇ ಇತ್ಯರ್ಥವಾಗೋದು. ಬಲಿ ಕೊಡಬೇಕಾದ ಪ್ರಾಣಿಯೊಂದಿಗೆ, ಸಂಜೆ, ಹೋತಾ ಅನ್ನಿಸಿಕೊಂಡವನು, ಸಿನಿಮಕ್ಕೆ ಬಂದೇ ಬರುತ್ತಾನೆ. (5) ಸಾಲಗಾರರಿಂದ ತಪ್ಪಿಸಿಕೊಳ್ಳಲು ಒಳನುಗ್ಗಿದ ಮಹಾಜನಗಳು ಸುಮಾರು 50 ಜನರಾದರೂ ಇರುತ್ತಾರೆ, ಪ್ರತಿ ಥಿಯೇಟರಲ್ಲೂ! ಬೇಕಾದರೆ, ಪರೀಕ್ಷೆಮಾಡಿ. ಚಿತ್ರ ಮುಗಿಯುವುದಕ್ಕೆ ಎರಡು ನಿಮಿಷ ಹಿಂದೆ, ಪರದೆ

ಮೇಲೆ, "ಎಚ್ಚರಿಕೆ! ಸಾಲ ವಸೂಲಿಗಾಗಿ ಹೊರಗೆ ಜನ ಕಾದಿರುವರು" ಎಂಬ ಒಂದು ಸ್ಲೈಡು ಹಾಕ್ಲಿ, ಕಡಮೆ ಪಕ್ಷ 50 ಜನವಾದರೂ, ಕೊತಕಡೆಯಿಂದಲೇ ಮುಂದಿನ ಷೋಗೆ ಟಿಕೆಟ್ ತೆಗೆದುಕೊಳ್ಳುತ್ತಾರೆ. ತಲೆಯಮೇಲೆ ಒಂದು ಟವ ಲೆಳೆದುಕೊಂಡು ಪುಸಕ್ಕನೆ ಎರಡಾಣೆ ಬೆಂಚಲ್ಲಿ ಕೂತು ಶಿಳ್ಳೆಹೊಡಿಯುತ್ತಾ ಇದ್ದರೆ, ಯಾವ ಸರ್ಪದೃಷ್ಟಿ ಸಾಹುಕಾರನಿಗೂ ಹೆದರಬೇಕಾಗಿಲ್ಲ. (7) ತಮ್ಮ ನೆಂಟರಿಷ್ಟರ ಬುದ್ಧಿ ಪರೀಕ್ಷೆಗಾಗಿ ಹಲವರು ಸಿನಿಮಾಗೆ ಹೋಗುತ್ತಾರೆ. ಸೊಸೆ ಬಂದು, "ತುಂಬಾ ಚೆನ್ನಾಗಿತ್ತು ಕಥೆ" ಎಂದರೆ, "ಈ ಹೀಚಿಗೆ ಏನು ಮಹಾ ಮೆದುಳಿದೆ. ಇದು ಬಂದು ನನ್ನೆದುರು ಲಂಕಿಣಿಮಾಡಿ, ಕಥೆ ಚೆನ್ನಾ ಗಿದೆ, ಅಂತ ಹೇಳುತ್ತದಲ್ಲಾ....ನಮ್ಮ ಗೇಣುಗೋಪಾಲದಾಸರ ಕಥೇನ ಇದೆಲ್ಲಿ ಕೇಳಿದೆ" ಎಂದು ಕುದಿದು, ಅದೆಂಥಾ ಹೊಲಸು ಸಿನಿಮಾನೋ? ಯಾವ ಸೂಳೆ ಕುಣಿತಾನೋ, ನೋಡೇಬಿಡೋಣ, ನೋಡಿಕೊಂಡು ಬಂದು, ಇದರ ಯೋಗ್ಯತೆ ಇಷ್ಟು ಅಂತ ಸಾರೋಣ ಅಂತ, ಅತ್ತೆಯವರೂ, ಅವರ ಪತಿ ಯವರೂ, ಆ ಸಂಜೆ ಹೋಗುತ್ತಾರೆ. ಅವರೂ ಕಿಕ್ಕಿರಿಯುತ್ತಾರೆ. ವಿದ್ಯಾರ್ಥಿ ಗಳ ಮನಸ್ಸನ್ನು ತಿದ್ದುತ್ತಿರುವುದು ತಾವಲ್ಲ, ತಾರೆಯರು ಎಂಬ ತತ್ವವನ್ನರಿತ ಉಪಾಧ್ಯಾಯರು, ತಮ್ಮ ಸುತ್ತಲಿನ ಹುಡುಗರ ಹಾವಭಾವಗಳು ಎತ್ತ ಕಡೆ ಹರಿಯುತ್ತಿದೆ ಎಂದು ತಿಳಿದುಕೊಳ್ಳುವುದಕ್ಕಾಗಿ ಒಳಬರುತ್ತಾರೆ. (8) ಸಿನಿ ಮಾಗೆ ಹಲವರು ಬರುವುದು, ಇತರರ ಕುಹಕದಿಂದಲೇ ಗಣೇಶನ ಹೊಕ್ಕುಳಲ್ಲಿದ್ದ ಚೇಳಿಂದ ಬೆರಳು ಕುಟುಕಿಸಿಕೊಂಡರೂ, ಬಾಗುಂದಿ, ಎಂದು ನಟಿಸಿ ತನ್ನ ಒಡನಾಡಿಗಳಿಗೂ ಅದೇ ಆನಂದವನ್ನು ಕೊಟ್ಟ ಕಿಲಾಡಿಯಂತೆ, "ಲೋ! ಏ! ಏನ್! ಹೋಗ್ಗೋ, ಇವತ್ತು" ಎಂದು ಉಬ್ಬಿಸಿ ದಬ್ಬಿದವರು ಪ್ರತಿ ಒಂದು ಸಿನಿಮಾ ಮಂದಿರದಲ್ಲೂ ನೂರಿನ್ನೂರು ಜನವಾದರೂ ಇರುತ್ತಾರೆ. ಪ್ರದರ್ಶನ ಅರ್ಧ ಮುಗಿದ ಕೂಡಲೇ, ಅವರನ್ನು ನಾವು ನೋಡಬಹುದು. 'ಸಿಡುಕಿ ರೋಷದಿ' ಗುಡಿಗುಡಿಸುತ್ತ, ಅವರು ಬೇಗ ಬೇಗ ಹೊರಟುಬಿಡ್ತಾರೆ. ನೆಟ್ಟಗೆ ....ತಮ್ಮ ಸ್ನೇಹಿತರ ರೂಂ ಬಾಗಿಲುಗಳನ್ನು ಬಡಿಯುವುದಕ್ಕೆ. ಅವರೂ ಒಳಗೆ ನಗುತ್ತಾ ಕೂತಿರುತ್ತಾರೆ...."ಏ! ಏನ್! ಹೇಗಿತ್ತೋ!" ಎಂದು ಲೇವಡಿ ಮಾಡುತ್ತಾ.... (9) ಇನ್ನು....ಎದುರು ಸೀಟಿನ ಮೇಲಿನ ಆಯಿಲ್ ಕ್ಲಾತನ್ನು ಹರಿದು ಸಾಗಿಸುವುದಕ್ಕಾಗಿ ಬಂದವರು, ಹೆಡ್ ಕ್ಲಾರ್ಕಿನ ಹೆಬ್ಬೆಟ್ಟನ್ನ ಕತ್ತಲಲ್ಲಿ ಬೂಟ್ಸುಕಾಲಿಂದ ತುಳಿಯುವುದಕ್ಕಾಗಿ ಹೊಂಚು ಹಾಕುತ್ತ ನುಗ್ಗಿದ ಕೆಳ ಗುಮಾಸ್ತೆಯವರು, ಹಿಂದೆ ಕೂತ ಸಾಹೇಬರಿಗೆ ತಮ್ಮ ಸೀಟಿಂದಲೇ ಹೊಗೆ ಹಾಕುವುದಕ್ಕಾಗಿ ಬಂದವರು, ಮೇಷ್ಟರು—ಹದಿಮೂರಾಣೆ ಸೀಟಲ್ಲಿ ಕೂತಿದ್ದರೆ ತಾವು ಅದಕ್ಕಿಂತ ಹೆಚ್ಚಿನ ಹಣದ ಸೀಟು ಸಂಪಾದಿಸಿ, ಅಲ್ಲಿಂದ, ಎದ್ದು ಕತ್ತು ನೀಡಿ 'ನಮಸ್ಕಾರ. ಸಾರ್' ಎಂದು ಕೂಗಿ ಆತನನ್ನು ಅವಮಾನಪಡಿಸಲು ಬಂದವರು........ಹೀಗೆ, ನೂರಾರು ಜನ ! ಇಂಥವರು ಒಂದು ಮಂದಿರ ದಲ್ಲಿ ತುಂಬಿ ಕಿಕ್ಕಿರಿದರೆ, ಚಿತ್ರ ಚೆನ್ನಾಗಿದೆ, ಅಂತಲೆ?

—ಶ್ರೀ ಕೇಸರಿ.

ನವಭಾರತಗೀತೆ

ಕೇಳಿ, ಕೇಳಿ, ಗೆಳೆಯರೆ! ನೆಹರು ಯಂತ್ರ ಘೋಷವಾ!
ಏಳಿ, ತನ್ನಿ, ಬೇಗನೆ! ಭರತ ಭುವಿಗೆ ತೋಷವಾ!

(ಆತ್ಮಗತಂ)

ಹಳೆಯ ಹೊಳೆಯ ಗೇರುಸೊಪ್ಪೆ ದೀಪವಾಗಲಿ,
ಸಿಡಿಲ ತಂದು ಗುಡಿಸಲೊಳಗೆ ತುಂಬಿ ಬೆಳಗಿಸಿ!
ಕಾನನ ಘುಗಮುಗಿಪ ಗಂಧ ಶಾಲೆಯಾಗಲಿ,
ಮೇರೆ ಇರದ ಗಗನ ಡಕೊಟ ಬೀದಿಯಾಗಲಿ,
ಸುತ್ತ ಕಡಲು ಹಡಗ ಹೊರುವ ಪಾತ್ರೆಯಾಗಲಿ,
ವರತರಂಗ ವಿವಿಧಗಾನ ಸೂತ್ರವಾಗಲಿ,
ಕೃತಕ ಹಾಲು, ವಿಕೃತರಬ್ಬರೆಮ್ಮದಾಗಲಿ,
ವೇಣುವನಗಳೆಲ್ಲ ನ್ಯೂಸು ಪ್ರಿಂಟದಾಗಲಿ,
ಕಲ್ಲು ಮಣ್ಣು ಕರಗಿ ರೆನ್‌ಕೊ ತಾರ್ಸಿಯಾಗಲಿ.
ಇಂಜಿನೊಳಗೆ ಇರುವುದೆಲ್ಲ ಎಮ್ಮೊಳಾಗಲಿ,
ಕೆಂಚಗಿರುವ ಗುಡ್ಡವೆಲ್ಲ ಕಬ್ಬಿಣಾಗಲಿ,
ಮೋಟರಾದಿ ಲಾರಿಯೆಲ್ಲ ನಮ್ಮದಾಗಲಿ,
ಸೆಲ್ಲುಲೋಸು ತ್ವರಿತದಿಂದ ವಸ್ತ್ರವಾಗಲಿ,
ಮೂಳೆ ರಾಶಿ ಹಾಳು ನೆಲಕೆ ಗೊಬ್ಬರಾಗಲಿ,
ಯಂತ್ರ ತಂತ್ರವೇ ನಮ್ಮ ಮಂತ್ರವಾಗಲಿ

(ಪ್ರಕಾಶಂ)

ಮನೆಯ ಮೂಲೆಯಲ್ಲಿ ಕುಳಿತು ಚರಕ ತಿರುಗಿಸಿ
ನೂತ ದಾರ ನೆಯ್ದು ಮಿಂದಿ, ನಾಮ ಜಪಿಸಲಿ.

ಪರ--ವಿರೋಧ

‘ ಮಾನವಜೀವನದಲ್ಲಿ ಸಂಗೀತಕ್ಕೆ ಪ್ರತ್ಯೇಕ ಸ್ಥಾನವಿದೆ, ಎಂಬುದನ್ನು ನಾವು ನಂಬುತ್ತೇವೆ ’ ಎಂಬ ವಿಷಯದ ಮೇಲೆ ಮೊನ್ನೆ ಒಂದು ಚರ್ಚೆ ನಡೆಯಿತು. ವಿಷಯದ ಪರವಾಗಿ ಕೆಲವರೂ, ವಿರೋಧವಾಗಿ ಕೆಲವರೂ ಮಾತನಾಡಿದರು. .. . .‘‘ ಸಂಗೀತಕ್ಕೆ ‘ ಪ್ರತ್ಯೇಕ ’ ಸ್ಥಾನವಿದೆ ‘‘ ಎಂಬುದನ್ನು ನಾವೂ ಒಪ್ಪುತ್ತೇವೆ ’’ ಎಂದು ವಿರೋಧಿಗಳು ಸಮ್ಮತಿ ಹೊಡೆದದ್ದೇ ಸ್ವಾರಸ್ಯ ! ವಿಷಯದ ಪರವಾಗಿ ಮಾತನಾಡುತ್ತ, ಒಬ್ಬರು :

‘ ಪಿಟೀಲು ಬಾರಿಸುವವರ ಮುಂದೆ ಕೂತುಕೊಂಡು ತಾಳ್ಮೆಯಿಂದ ಶ್ರವಣ ಮಾಡುವುದರಿಂದ ಅಜೀರ್ಣವೇ ಇತ್ಯಾದಿ ರೋಗಗಳು ಮಾಯವಾಗುತ್ತವೆ ’ ಎಂದು ಇತ್ತೀಚೆಗೆ ವಿಜ್ಞಾನಿಗಳು ಕಂಡು ಹಿಡಿದಿದ್ದಾರೆಂದ ಮೇಲೆ ಸಂಗೀತದ ವೈದ್ಯಕೀಯ ಚೈತನ್ಯ ವೇದ್ಯವಾಗುತ್ತದೆಯಲ್ಲವೇ ?

ವಿರೋಧ : ಸರಿ ಅಜೀರ್ಣವೇನೋ ವಾಸಿಯಾಗಬಹುದು. ಆದರೆ ಸನ್ನಿಪಾತವೇ ಮುಂತಾದ ಬಾಕೀರೋಗಗಳು ಕಾಣಿಸಿಕೊಳ್ಳುತ್ತವಲ್ಲ ! ಇದನ್ನು ಆ ವಿಜ್ಞಾನಿಗಳು ಮರೆತದ್ದು ಶೋಚನೀಯ :

ಪರ : ಈಚೆಗೆ ಸರ್ಕಾರದವರು ಹೊಸದಾಗಿ ಕಟ್ಟಿಸಿರುವ ಆಸ್ಪತ್ರೆಯಲ್ಲಿ ವಾರ್ಡಿಗೆ ಒಂದೊಂದರಂತೆ ರೇಡಿಯೋ ಏರ್ಪಾಟು ಮಾಡಿರುವುದು, ರೋಗಿಗಳ ಮೇಲೆ ಸಂಗೀತದ ಮಹಿಮೆಯನ್ನರಿತೇ. .. ...

ವಿ : ಹೌದು. ಅಂತೆಯೇ ಅದೇ ಆಸ್ಪತ್ರೆಯಲ್ಲಿ ಸರಾಸರಿ ದಿನಕ್ಕೆ ನೂರರಂತೆ ರೋಗಿಗಳು ದಾಖಲಾಗಿ ನೂರರಂತೆಯೇ ಡಿಸ್ಚಾರ್ಜ್ ಪಡೆಯುತ್ತಿದ್ದಾರೆಂಬ ಅಂಶವೂ ಸ್ಫೂರ್ತಿದಾಯಕವಾಗಿದೆಯಲ್ಲವೆ ?

ಪರ : (ಮಕ್ಕಳಮೇಲೆ ಸಂಗೀತದ ಪರಿಣಾಮವನ್ನು ವಿವರಿಸುತ್ತಾ) : ‘‘ ಒಬ್ಬರ ಮನೆಯಲ್ಲಿ ಮಗು ಬಹಳ ಕಿರಿಚುತ್ತಿತ್ತು ಏನುಮಾಡಿದರೂ ಸುಮ್ಮನಾಗಲಿಲ್ಲ. ಹಾಲುಕೊಟ್ಟರು - ಬೆಕ್ಕುತೋರಿಸಿದರು - ಕೊನೆಗೆ ಯಾರೋ ಹೇಳಿದಂತೆ ಆಫೀಮು ಕೂಡ ತಿನ್ನಿಸಿದರು—ಊಹೂಂ—ನಿಲ್ಲಿಸಲಿಲ್ಲ. ಆಗ ತಾಯಿ ಎರಡು ಸ್ವರ ಹಾರ್ಮೋನಿಯಂ ಬಾರಿಸುತ್ತೇನೆಂದಳು—ಬಾರಿಸಿದಳು—ಎಷ್ಟೇ ಆಗಲಿ ಹೆತ್ತಕರುಳಿಗೆ ತಿಳಿಯದೇ ಮದ್ದು ?—ಮಗು ಸುಮ್ಮನಾಯಿತು - ಮಲಗಿತು - ನಿದ್ದೆಕೂಡ ಮಾಡಿತು. . (ಅಷ್ಟರಲ್ಲಿ)

ವಿ : ಆದರೆ ಮತ್ತೆ ಏಳಲಿಲ್ಲ—ಅಷ್ಟೆ !

ಇದೇ ರೀತಿ ಚರ್ಚೆ ಮುಂದುವರಿದು—ಓಟಿಗೆ ಹಾಕಲ್ಪಟ್ಟಿತು ಒಂದು ಪಕ್ಷಕ್ಕೆ ಒಂದೇ ಓಟೂ, ಬಾಕೀದೆಲ್ಲಾ ಮತ್ತೊಂದು ಕಡೆಗೂ ಬಂದಿದ್ದುವು. ಆ ಒಂದು ಓಟು ಕೊಟ್ಟವರು ಸಮಾಜದ ಸಂಗೀತದ ಮೋಡಂ-

—ಟೀಯಸ್ಸಾರ್ರಾವ್.

ವಿವಾಹ ವಿಚ್ಛೇದನ

ಹೋದ ತಿಂಗಳು ಮಹಿಳಾ ಸಮ್ಮೇಳನ ನಡೀತು. ವಾಮೂಲಿನಂತೆ ಸ್ವಾಗತಭಾಷಣ, ಇತ್ಯಾದಿಗಳೆಲ್ಲಾ ಆದ್ಮೇಲೆ, ಠರಾವುಗಳು ತೆಗೆದುಕೊಳ್ಳಲ್ಪಟ್ಟುವು. ಅವುಗಳಲ್ಲಿ ಮುಖ್ಯವಾದ್ದು, "ಮಹಿಳೆಯರಿಗೆ ವಿವಾಹ ವಿಚ್ಛೇದನದ ಹಕ್ಕಿರಬೇಕು" ಅನ್ನೋದು !

ಬಿಸಿಬಿಸೀ ಚರ್ಚೆ ನಡೀತು ! ಸನಾತನ ಧರ್ಮ ಪ್ರೇಮಿಗಳು, "ಇಂಥಾ ಕಾನೂನಿಂದ ನಮ್ಮ ಆರ್ಯ ಧರ್ಮದ ಧ್ವಜಪತಾಕೇನೇ ಮುರಿದ್ಹಾಕ್ದಾಗೆ ಆಗತ್ತೆ. ಭಾರತದ ಆದರ್ಶಕ್ಕೆ ಮಸಿ ಬಳಿದಂತಾಗೆತ್ತೆ" ಎಂದು ಸಾರಿದರು. ಪ್ರಗತಿದಾಯಿಗಳು, "ಪುರಾತನ ಬಂಧನಗಳ ಕಾಲ ಮುಗೀತು. ಈ ಗಂಡಸರು ನಮ್ಮನ್ನ ತುಳಿದ್ಹಾಕ್ತಾರೆ. ಅವರಿಗೆ ಬುದ್ಧಿ ಕಲಿಸ್ಬೇಕು ವಿಚ್ಛೇದನದ ದಿಗಿಲಿದ್ದರೆ ಅವರು ಸ್ವಲ್ಪ ಅಂಕೇಲಿರ್ತಾರೆ" ಎಂದು ಕೋಪಿಸಿದರು. ವಾದ ಪ್ರತಿವಾದಗಳು ಚುರುಕಾಗಿ ನಡೆದುವು. ಕೊನೆಗೆ ಠರಾವು . .ಸರಿಯಾದ ತೀರ್ಮಾನಕ್ಕೇನೋ ಬರ್ಲಿಲ್ಲ. ಅದು ಮುಖ್ಯವಾದ ಅಂಶಾನೂ ಅಲ್ಲ-

ಮುಖ್ಯವಾದ ಅಂಶ, ಇದರಿಂದ ಪತಿದೇವರುಗಳ ಮೇಲೆ ಆಗಿರೋ ಪರಿಣಾಮ ! ಎಷ್ಟೋ ಜನ ಪತಿದೇವ್ರುಗಳು, "ಇನ್ನೇನ್ಗತಿ, ಈ ಕಾನೂನು ಬಂದ್ಬಿಟ್ರೆ ! ನಮ್ಮೋಳು ಮೊದಲು ಬಿಟ್ಹೋಗ್ತಾಳೆ, ಆಮೇಲೆ ಈ ಸ್ಫುರದ್ರೂಪಿ ಮುಖಕ್ಕೆ ಇನ್ನ್ಯಾವ್ಳೋಳು ಸಿಕ್ತಾಳಪ್ಪಾ" ಅಂತ ತಲೇಮೇಲೆ ಕೈಹೊತ್ತು ಕೂತ್ಬಿಟ್ಟಿದಾರಂತೆ. ಒಬ್ಬೊಬ್ಬರು—ಪೂರ್ವಾಚಾರದೋರು ಅಂತ ಕಾಣತ್ತೆ ಪಾಪ—"ಎರಡನೇ ಕಂಕಣದ ಪ್ರಾಪ್ತಿ ಏನಾದ್ರೂ ಇದೆಯೋ ತಮಗೆ" ಅಂತ ಗಾಭರಿಯಿಂದ ಜಾತಕ ನೋಡಸ್ತಿದಾರಂತೆ.

ಒಬ್ಬ ಪತಿ ಮಹಾಶಯರು, "ಅರೇ ! ನಾನು ತ್ಯಾಗಯ್ಯಕ್ಕೊ, ಶಾಲಿಮಾರ್‌ಗೂ ಇವಳ್ಗೆ ಸುಳ್ಳು ಹೇಳಿ ಹೋದ್ದು ಹೇಗೋ ಪತ್ತೆ ಆಗ್ಬಿಟ್ಟಿರಬೇಕು ! ಅದಕ್ಕೇ ಠರಾವಿಗೆ ಬೆಂಬಲ ಕೊಟ್ಟು ಕುಣಿದ್ಬಂದಿದಾಳೆ !" ಅಂತ ಚುರುಕು ಬುದ್ಧಿಯಿಂದ ಊಹಿಸಿ, ಅವಳನ್ನ ವಾರಕ್ಕೆರಡು ಪಿಕ್ಚರ್‌ಗೆ ಕರಕೊಂಡು ಹೋದರಂತೆ ! ನನ್ನ ಗೆಳತೀರೆಲ್ಲಾ ಈಗ ದಿನಕ್ಕೊಂದೊಂದು ಹೊಸ ಹೊಸ ಸೀರೆ ಉಟ್ಕೊಂಡು ಬರ್ತಿದಾರೆ. ಒಳಗುಟ್ಟು ವಿಚಾರಿಸಿದರೆ—ಆ ಠರಾವೇನಂತೆ ಕಾರಣ !

ಈಗ ಹೆಂಗಸರ ಮುಖದಲ್ಲಿ ಒಂದು ಹೊಸ ಕಳೆ ಬಂದಿದೆ. 'ಅವ್‌ಜೇತ್ ಗಲೀ' ಅನ್ನೋ ಹೆಮ್ಮೆ ತೋರ್ತಿದೆ. ಮನೆಗಳಲ್ಲಿ ಈಗವರ್ದ್ದೇ ಮಾತಂತೆ.

“ ಅಡಿಗೆ ಚೆನ್ನಾಗಿಲ್ಲ, ಕಾಫೀಗೆ ಸಕ್ರೆ ಸಾಲ್ದು....” ಅನ್ನೋ ಸೊಲ್ಲೇ ಅಡಗ್ಹೋಗಿದೆಯಂತೆ !

ಎಷ್ಟೋ ಜನ ಗಂಡಸರು ತಾವು ತಮ್ಮಲಂಕಾರಕ್ಕೆ ಸರಿಯಾಗಿ ಗಮನ ಕೊಡ್ತಿಲ್ಲಾ ಅಂತ ಇದ್ದಕ್ಕಿದ್ದ ಹಾಗೇ ಕಂಡ್ಹಿಡಿದು, ಈಗ ಟಿಪ್‌ಟಾಪಾಗಿ, ಹೊಸ ಮದುವಣಿಗ್ರ ಹಾಗೆ ಓಡಾಡ್ತಿದಾರಂತೆ. ಈ ಹದಿನೈದಿಪ್ಪತ್ತು ದಿನದಲ್ಲಿ, ಸ್ಟುಡಿಯೋಗಳಿಗೂ, ಸಿನಿಮಾ ಥಿಯೇಟರ್‌ಗಳಿಗೂ, ಸೀರೆ ಎಂಪೋರಿಯಮುಗಳಿಗೂ, ಜ್ಯುಯಿಲರಿ ಷಾಪುಗಳಿಗೂ, ಆದಾಯ ದ್ವಿಗುಣವಾಗಿದೆಯಂತೆ. ಹೂವಿನಂಗಡಿಯೋರೂ, ಬಳೇಷಾಪ್‌ನೋರೂ, ಬಸ್ಸು ಜಟಕಾದೋರೂ, ಇದೇ ಸಮಯದಲ್ಲಿ ಎಷ್ಟೋ ಹೊಟ್ಟೆ ತುಂಬಿಸ್ಕೊಳ್ತಿದಾರಂತೆ !

ಲಾಲ್‌ಬಾಗ್ ಕಬ್ಬನ್‌ಪಾರ್ಕುಗಳಲ್ಲೂ, ಕೃಷ್ಣರಾಜಸಾಗರ ದರಿಯಾದೌಲತ್‌ಗಳಲ್ಲೂ ಅದಕ್ಕೇನಂತೆ ಇಷ್ಟು ಜನ ಹಳೆ ದಂಪತಿಗಳು ತಂಡೋಪತಂಡವಾಗಿ ಕಾಣಸ್ತಾ ಇರೋದು !

ಇಷ್ಟೆಲ್ಲಾ ಪ್ರಯತ್ನಪಡ್ತಿದ್ದರೂ ಪೂರ್ತಿ ಧೈರ್ಯ ಇಲ್ಲದೆ ಪತಿದೇವರುಗಳೆಲ್ಲಾ ಶೀಘ್ರದಲ್ಲೇ ಸಭೆ ಸೇರಲಿರುವರಂತೆ,....ಮತ್ತು, ಈ ವಿಚ್ಛೇದನದ ಭಾವನೆ ಮಹಿಳೇರಲ್ಲಿ ಉತ್ಪನ್ನವಾಗುವುದಕ್ಕೆ ತಮ್ಮಿಂದ ಆಗಿರೋ ಅಪರಾಧಗಳ್ನೂ, ಕುಂದುಗಳ್ನೂ ಕೂಲಂಕಷವಾಗಿ ಪರಿಶೀಲ್ಸಿ, ನಿವಾರಣೋಪಾಯಗಳ್ನ ಚರ್ಚಿಸಿ, ತೀರ್ಮಾನಕ್ಕೆ ಬರಬೇಕೂಂತ ನಿರ್ಧರಿಸಿದಾರಂತೆ !

—ಟಿ. ಸುನಂದಮ್ಮ.

— —— o ——— —



ಕಲಿಗನ್ನಡ ಸ್ಪರ್ಧೆ

[ಸೂಚನೆ : ಅಪೂರ್ಣಪದವಲ್ಲಿ ಖಾಲಿಜಾಗವನ್ನು ಭರ್ತಿಸಿ.]

(1) ಈಚಿನ ಕೆಲವು ನಟನಟಿಯರು ಪ್ರೇಮಪೂರಿತ ದೃಶ್ಯಗಳಲ್ಲಿ ನಟಿಸುವ ಗತ್ತು ಗೈರತ್ತುಗಳನ್ನು ಗಮನಿಸಿದರೆ, ಸಾಕಷ್ಟು “ ಪ್ರಗತಿ—ಎಮಿ ”ಗಳಾಗಿರುವಂತೆ ತೋರುತ್ತಿದೆ.

(2) ನಮ್ಮ ಹೊಸ ಸಾಹೇಬರ ಮುಖದಮೇಲೆ ಸದಾ ತಾಂಡವವಾಡುವ ಸರಾಸರಿ ಕಳೆಯನ್ನು ನೋಡಿದರೇ ಗೊತ್ತಾಗುತ್ತೆ, ನಮ್ಮಂತಹ ಬಡ ಗುಮಾಸ್ತೆಗಳಮೇಲೆ ಆತನ ಎದೆಯಲ್ಲಿ ಒಂದಾದರೂ “ ಅಂತಃ—ರಣ”ದ ಸುಳಿಯೇ ಇಲ್ಲ ಅಂತ.

(3) ……..ಇದೇ ಲೇಖಕರು ಇತ್ತೀಚೆಗೆ ಹೊರಗೆಡಹಿರುವ ‘ ಚಿಲಿಪಿಲಿ ’ ‘ ಅಮ್ಮಯ್ಯನ ಆರ್ಭಟ ’ ಮುಂತಾದ ಸಾಹಸಗಳು ನಮ್ಮಲ್ಲಿ ಇತ್ತೀಚೆಗೆ ಹೆಚ್ಚಿಕೊಂಡಿರುವ “ —ಶು ಸಾಹಿತ್ಯ”ಕ್ಕೆ ತೂಕವಾದ ಮಾದರಿಗಳೇ ಆಗಿದೆ ಎಂದು ಹೇಳದೆ ವಿಧಿಯಿಲ್ಲ.. …..

(5) ಕೇವಲ ಕೆಳಗುಮಾಸ್ತೆಯಾದರೂ ಇಷ್ಟಬಂದಂತೆ ಖರ್ಚುಮಾಡುತ್ತಿದ್ದುದರಿಂದಲೇ ಇರಬೇಕು, ನಮ್ಮ ಈಶ್ವರಯ್ಯನನ್ನು ಸ್ನೇಹಿತರೆಲ್ಲ “—ಂಚಾನನಮಹೇಶ್ವರ ” ಅಂತ ಕರೆಯುತ್ತಿದ್ದುದು.

(5) …. . “ ನವನವೀನನೃತ್ಯಕಲಾ—ಟ”ದವರು ಇದೇ ಊರಿನ ‘ ಓಂ ’ ಥಿಯೇಟರಿನಲ್ಲಿ ತಮ್ಮ ಅದ್ಭುತ ಆಟಗಳನ್ನು ಪ್ರಾರಂಭಿಸುವ ತಾರೀಖನ್ನು ಗಮನಿಸಿ.

(6) ಮದುವೆ ಗಂಡು ಹೊಲಿಸಬೇಕಾದ ಸೂಟಿನ ಸೇಡು (Shade ?) ಕೇಳಬೇಕಾದ ವಾಚಿನಷೇಪು ಇತ್ಯಾದಿ “ —ೕಕಾನುಭವ ” ಚೆನ್ನಾಗಿದ್ದುದರಿಂದಲೇ ಅವನು ಮಾವನಿಗೆ ಭಾರವಾದ ಅಳಿಯನೇ ಆದ.

—ಟೀಯಸ್ಸಾರ್ರಾವ್.

ಸರಿಯಾದ ಉತ್ತರ ;—(1) ಕ (2) ಕಿ (3) ಪ (4) ಲ (5) ಶಾ (6) ಶೋ (7) ಷೆ

—ಟೀಯಸ್ಸಾರ್ರಾವ್.

ನೂರು ರೂಪಾಯಿಗೊಂದು ಭೂತ

— ೧ —

ಸುಬ್ರಹ್ಮಣ್ಯದ ಜಾತ್ರೆ ಸಮಯಕ್ಕೆ ಸರಿಯಾಗಿ, ಸುತ್ತಮುತ್ತ ಊರುಗಳಿಂದ ಎತ್ತಿನ ಗಾಡಿಗಳು ಪಯಣ ಹೊರಡುತ್ತವೆ. ಆಳೊಂದಕ್ಕೆ ಎರಡು ರೂಪಾಯಿ, ಮೂರು ರೂಪಾಯಿ, ಬಾಡಿಗೆ ತೆಗೆದುಕೊಂಡು, ಎರಡು ದಿನದ ಪ್ರಯಾಣಕ್ಕೆ ಒಟ್ಟು ಹತ್ತು ಹನ್ನೆರಡು ರೂಪಾಯಿ ಸಂಪಾದಿಸುವರು, ಗಾಡಿಯವರು. ಅಪರಿಚಿತ ಜನರು, ಮುದುಕರು, ಮೋಟರು, ಜಾತ್ರೆಯಲ್ಲಿ ಪುಣ್ಯಗಳಿಸುವ ಮೋಹದವರು—ಕಾಸು ಸಂಪಾದಿಸುವ ಆಸೆಯವರು, ಎಲ್ಲರೂ ಗಾಡಿಯೊಳಕ್ಕೆ ಸೇರಿ, ಹರಟೆ ಹೊಡೆಯುತ್ತ, ತೂಕಡಿಸುತ್ತ, ದಾರಿ ನೂಕುವರು. ಕಾಡು, ಕತ್ತಲು ಆದ್ದರಿಂದ, ಒಳಗಿದ್ದ ಜನ ತಮತಮಗೆ ಹೇಳಿಕೊಳ್ಳುವ ಕಥೆಗಳೆಲ್ಲವೂ ಕಳ್ಳಕಾಕರದೇ; ಭೂತಪ್ರೇತಗಳದೇ. ಮಂತ್ರ, ಮಾಟ, ಪಿಶಾಚಿ, ಮೋಹಿನಿ—ಇವೇ ಅವರನ್ನು ಎವೆ ಇಕ್ಕದೆ ಎಚ್ಚರವಾಗಿ ಕೂರಿಸುತ್ತಿದ್ದದ್ದು. ಕಳೆದ ವರ್ಷ, ಇಂಥ ಒಂದು ಗುಂಪಿಗೆ ನಾನೂ ಗಂಟುಬಿದ್ದೆ. ಭೂತದ ಕಥೆ ಕೇಳಿ ಕೇಳಿ, ನನ್ನ ಮೈ ಬೆವತು ಹೋಗಿತ್ತು.

ನನ್ನ ಗಾಡಿಯಲ್ಲಿ ಸೇರಿಕೊಂಡಿದ್ದ ಒಬ್ಬ ಇನ್‌ಷೂರನ್ಸ್ ಏಜಂಟ್ ಮಾತ್ರ ಉದ್ದಕ್ಕೂ ತಲೆ ಅಲ್ಲಾಡಿಸುತ್ತಲೇ ಇದ್ದ. ಖದ್ದರ್ ಜುಬ್ಬ, ನೆಹರು ಅರ್ಧಂಗಿ, ಹಿಂದಕ್ಕೆ ಬಾಚಿದ ಇಳಿಕೂದಲು— ಉಡುಪಿ ಕಡೆಯವ. ಕಾಸಗೋಡು, ಕುಂದಾಪುರ, ಉಪ್ಪಿನಂಗಡಿ, ಮೂಡಬಿದರೆ, ಮಂಜೇಶ್ವರ ಮುಂತಾದ ಕಡೆಗಳಲ್ಲಿ ನಡೆದಿದ್ದ ನಿಜವಾದ ಭೂತ ಚೇಷ್ಟೆಗಳನ್ನು ನಾವೆಲ್ಲ ಆತನ ಕಿವಿಯೊಳಕ್ಕೆ ತುಂಬಿದೆವು. ಆದರೂ, ಆತ, "ಸುಳ್ಳು! ಶುದ್ಧ ಸುಳ್ಳು! ನಿಮಗೆಲ್ಲ ಭ್ರಾಂತು" ಎಂದು ಮೂಗೆತ್ತಿದ.

ಗಾಡಿಯ ತುದಿಯಲ್ಲಿ ತುಟಿ ಕಚ್ಚಿಕೊಂಡು ತೂಗಾಡುತ್ತಿದ್ದ ಇಳಿವಯಸ್ಸಿನವರೊಬ್ಬರಿಗೆ ಆತನ ಮೇಲೆ ವಿಪರೀತ ಕೋಪ. ಒಂದೆರಡು ಸಲ ಅವರು ಆತನ ಕಡೆ ತಿರುಗಿ, "ಸುಳ್ಳು ಅಂತ ಅಷ್ಟು ಜೋರಾಗಿ ಹೇಳಬೇಡಯ್ಯ! ತಿಳಿಯದು, ಅನ್ನು, ನಾಕು" ಎಂದು ಗದರಿಸಿದರು. ಆ ಮಾತಿಗೆ ತಗ್ಗದೆ, ಯುವಕ ಮತ್ತು ಭೂತಗಳನ್ನು ಅಲ್ಲಗಳೆದಾಗ, ಯಾರೋ ಹೇಳಿದ ಕಥೆಗೆ ವಿಕಟವಾಗಿ ನಕ್ಕಾಗ, ಅವರ ತಾಳ್ಮೆ ನಂದಿತು. "ಅಯ್ಯ! ನೀನು ಶುದ್ಧ ಹೇಡಿ. ಅದಕ್ಕೋಸ್ಕರವೇ, ಹೀಗೆ, ಭೂತ ಪ್ರೇತ ಎಲ್ಲ ಸುಳ್ಳು ಎಂದು ಸಾಧಿಸಿ ಮಾತನಾಡುತ್ತೀಯ" ಎಂದರು. ಸ್ವಾರಸ್ಯವಾದ ಜಗಳ ಒಂದು ಪ್ರಾರಂಭವಾಗುತ್ತದೆ ಎಂಬ ಕುತೂಹಲದಿಂದ, ನಾವು ಉಡುಪಿ ತರುಣನ ಹತ್ತಿರಕ್ಕೆ ಸರಿದೆವು. ಒಬ್ಬಿಬ್ಬರು ತಮ್ಮ ಆಕಳಿಕೆಗಳನ್ನು ಅರ್ಧದಲ್ಲೇ ನುಂಗಿದರು

" ರೀ! ಯಾರನ್ನ ರೀ ನೀವು, ಹೇಡಿ, ಅನ್ನೋದು! ನನ್ನನ್ನೇನು? ಎಲ್ಲಿ ಮತ್ತೊಂದು ಸಲ ಅನ್ನಿ, ನೋಡೋಣ", ಅಂದ, ಆತ.

ಅವರು ಗಾಡಿಯ ಅಂಚಿನಿಂದಲೇ ಕೈನೀಡಿ ಆತನ ಕೈಯನ್ನು ಬಲವಾಗಿ ಹಿಡಿದು, ಅಮುಕುತ್ತಾ, " ಲೋ! ಪುಟ್ಟಕೂಸು! ನಿನ್ನನ್ನೇ ನಾನಂದದ್ದು, ಹೇಡಿ, ಅಂತ! ಭೂತದ ಬಾಲದ ತುದಿ ಕಂಡರೆ, ನೀನು, ಹೆದರಿ, ಸತ್ತು, ಸಪ್ತಸಮುದ್ರದಾಚೆ ಬೀಳುತ್ತೀಯ........ನಿನ್ನ ಮಾತು ಕೇಳಿದರೇನೆ, ನನಗೆ ಅಷ್ಟು ತಿಳಿಯುವುದಿಲ್ಲವೆ?........ಪ್ರೇತ, ಪಿಶಾಚಿ, ಎಲ್ಲ ಸುಳ್ಳಂತೆ, ಸುಳ್ಳು! ಮಹಾ ಕಂಡಿದಾನೆ, ಇವನು! ಇಂಗ್ಲಿಷ್ ಕಲಿತ ಶಿಂಗ್ಲೀಕ!" ಅಂದರು.

" ನಿಮ್ಮ ಮುಷ್ಟಿ ಬಲವಾಗಿದೆ, ಒಪ್ಪಿದೆ. ಆದರೆ, ನಿಮ್ಮ ಬುದ್ಧಿ ಯಾಕೊ, ಕೊಂಚ ಸಡಿಲವಾಗಿ ಬಿಟ್ಟಿದೆ, ಸ್ವಾಮಿ" ಎಂದ, ಯುವಕ, ಕೈಬಿಡಿಸಲು ಯತ್ನಿಸುತ್ತ.

ನಮಗೆಲ್ಲ ಒಳನಗು! ಘಾಟಿ ಮುದುಕ,- ಚೆನ್ನಾಗಿ ತಿನ್ನಿಸಿದ, ಚೆಳ್ಳೆಕಾಯಿ, ಜಂಭದ ಕೋಳಿಗೆ, ಎಂದು, ನಾವು ಹಿಗ್ಗಿದೆವು.

ಆಗ ಅವರು, " ನಂಬಿಕೆ ಇಲ್ಲವೋ, ನಿನಗೆ? ಈಗ ಹೋಗಿ ಸೇರುತ್ತೀವಲ್ಲ, ಛತ್ರ. ಅಲ್ಲಿ, ಇಳಿದಕೂಡಲೆ, ನಾನು ನಿನಗೆ ಒಂದು ಭೂತವನ್ನ ಮೂಡಿಸಿ ತೋರಿಸಿದರೆ, ಆಗ ನಂಬುತ್ತೀಯಾ?........ನೀನು ಕೇಳಿದ ಭೂತಾನ ತರಿಸುತ್ತೇನೆ, ಅಂತರಿಕ್ಷದಿಂದ....ಇನ್ನೇನು?.... ..ಸುಳ್ಳಂತೆ, ಸುಳ್ಳು! ಹಾಗಾದರೆ, ಮಾಂತ್ರಿಕರು ಮಲೆಯಾಳದವರು, ಎಲ್ಲರೂ ಕಳ್ಳರೇನು? ಎಲ್ಲರೂ ಮುಟ್ಠಾಳರೇನು?" ಎಂದರು. ಉಡುಪಿಯವನು ತಬ್ಬಿಬ್ಬಾದ. " ಆಗಬಹುದೋ, ಹೇಳು!" ಎಂದು ಅವರು ತಿವಿದರು- ನಾವೆಲ್ಲ ಯುವಕನಿಗೆ ಉತ್ಸಾಹ ಬರುವ ಮಾತುಗಳನ್ನಾಡಿದೆವು. " ಆಗಬಹುದು, ಅನ್ನಿ! ಸ್ವಾಮಿ! ಅದಕ್ಕೇನು?" ಎಂದೆವು. " ನೀನು ಕೇಳಿದವರ ಪ್ರೇತ! ಕತ್ತಲಲ್ಲಿ ನಿನ್ನ ಮುಂದೆ ಬರುತ್ತೆ!. .. ಆಗ, ನೀನು ಅಯ್ಯೋ ಅಂತ ಕಿರಿಚಿಕೊಂಡು ಕೆಳಗೆ ಬೀಳದೆ ಹೋದರೆ, ನಿನಗೆ ನಾನು ನೂರು ರೂಪಾಯಿ ಕೊಡುತ್ತೇನೆ. ನೀನು ಧೈರ್ಯವಾಗಿ 'ಸುಳ್ಳು' ಅಂತ ಅಲ್ಲಗಳೆದರೆ, ನನಗೆ ನೂರು ರೂಪಾಯಿ" ಎಂದರು. " ನೂರು ರೂಪಾಯಿ!" ಎಂದ. ಆತ. " ಬೇಡದೆ ಇದ್ದರೆ ಬಿಡು" ಎಂದರು, ಅವರು. " ನನ್ನ ಹತ್ತಿರ ಅಷ್ಟು ಹಣವಿಲ್ಲ, ಸ್ವಾಮಿ!" ಎಂದ, ಆತ. " ಸುತ್ತ ನೋಡಿದ. ಅದಕ್ಕವರು, " ಅಂಥ ಬಡಪಾಯಿಯಾದಮೇಲೆ, ಬಾಯಿಮುಚ್ಚಿಕೊಂಡು, ಬಾಕಿಯವರ ಮಾತಿಗೆ ಅಸ್ತು ಅಂತ ಹೇಳುತ್ತ ಸುಮ್ಮನೆ ಕೂಡು, ಗಾಡೀಲಿ" ಎಂದು, ಗೊಣಗುತ್ತ, ಅವರು ತಾವು ಹೊರಕ್ಕೆ ತೆಗೆದ ಚೀಲವನ್ನು ಮತ್ತೆ ಸೊಂಟಕ್ಕೆ ಸಿಕ್ಕಿಸಿದರು " ನನ್ನ ಹತ್ತಿರ ಹತ್ತು ರೂಪಾಯಿದೆ, ಅಷ್ಟೆ!"

ಎಂದು, ಉಡುಪಿಯುವನು ಪಿಸುಗುಟ್ಟಿದ. "ಧತ್! ಹತ್ತು ರೂಪಾಯಿಗೋಸ್ಕರ ನಾನು ಪಿತೃಲೋಕದಲ್ಲಿ ಆರಾಮವಾಗಿರುವವರನ್ನ ಪೀಡಿಸಿ ಭೂಲೋಕಕ್ಕೆ ಎಳೆದುಕೊಂಡು ಬಂದು ನಿನ್ನ ಅವಲಕ್ಷಣದ ಮುಖ ತೋರಿಸಲೆ! ಅದಾಗದು!" ಎಂದು ಅವರು ನಕ್ಕರು. ಗಾಡಿ ಆಚೆ ಉಗುಳಿದರು "ಕೊಟ್ಟರೆ, ನೂರು! ಇಲ್ಲದಿದ್ದರೆ, ಭೂತ ಬರುವ ಹಾಗಿಲ್ಲ" ಅಂದರು.

ಛೆ! ಒಳ್ಳೆಯದೊಂದು ಅವಕಾಶ ಹೋಯಿತಲ್ಲಾ!, ಎಂದು, ನಾವೆಲ್ಲ ನಿರಾಶರಾದೆವು. ನನ್ನ ಎದುರಿಗಿದ್ದವರೊಬ್ಬರು, "ನಾನು ಐದು ರೂಪಾಯಿ ಕೊಡುತ್ತೇನೆ, ಸ್ವಾಮಿ" ಎಂದು ಕೈನೀಡಿದರು. ಉಳಿದವರೂ ಕೂಡ, ಮುದುಕನ ಮಾಟಗಾರತನವನ್ನು ಪರೀಕ್ಷಿಸಿಯೇ ಬಿಡೋಣವೆಂಬ ಹುಮ್ಮಸ್ಸು ಹತ್ತಿತು. ಏಳೆಂಟು ಯಾತ್ರಿಕರು ಗಂಟು ಬಿಚ್ಚಿದರು. ನಾನೂ ಹನ್ನೊಂದೆಣಿಸಿದೆ. ಒಟ್ಟು ನೂರಾಯಿತು ಎಣಿಸಿ, ಜೋಡಿಸಿ, ಉಡುಪಿ ಯುವಕ ತನ್ನ ಪರ್ಸಿನೊಳಗಿರಿಸಿ, "ನಾನು ಮೂರ್ಛೆ ಬಿದ್ದರೆ, ನೀವೇ ಇದನ್ನ ತೆಗೆದುಕೊಳ್ಳಿ. ಜುಬ್ಬದ ಕಿಸೆಯೊಳಗಿದೆ, ನೋಡಿಕೊಳ್ಳಿ", ಎಂದು ಗೆಲವಿನ ನಗೆ ಬೀರಿದ, "ಎದೆಕೊಟ್ಟು ನಿಲ್ಲುತ್ತೀಯೋ, ನೋಡುತ್ತೇನೆ! ಛತ್ರ ಬಂತಲ್ಲ, ಇನ್ನೇನು! ನನ್ನ ಹತ್ರ ಇರುವ ನೂರರ ನೋಟನ್ನೂ ನೋಡಿಕೊಳ್ಳಿ" ಎಂದು, ಅವರು, ನಮ್ಮೆದುರು ನೋಟನ್ನು ಬೀಸಿದರು. ಛತ್ರವೂ ಬಂತು. ತುಂಬು ಕುತೂಹಲದಿಂದ ನಾವೆಲ್ಲ ಕೆಳಕ್ಕೆ ಧುಮುಕಿದೆವು.

ಪಾರುಪತ್ಯಗಾರ ನಮಗಾಗಿ ಒಂದು ಕೋಣೆಯನ್ನು ಬಿಡಿಸಿ ಕೊಡುವ ತನಕ ಕೂಡ ನಮ್ಮೆಲ್ಲರಿಗೂ ಸಹನೆ ಸಾಲದು. ಸಿಕ್ಕಿದ ತಕ್ಷಣವೇ, ಅದರೊಳಗೆ ಕಗ್ಗತ್ತಲೆಯಲ್ಲೇ ಜುಬ್ಬದ ತರುಣನನ್ನು ಕೂಡಿಹಾಕಿ ಬಾಗಿಲು ಹಾಕಿದೆವು. ಮುದುಕರು ರಸ್ತೆಯಿಂದ ಒಂದು ಹಿಡಿ ಮಣ್ಣುತಂದು ಮಂತ್ರಿಸಿ ಅದನ್ನು ಆ ಬಾಗಿಲಮೇಲೆ ಬಲವಾಗಿ ಎರಚಿದರು. ಹ್ರೋಂ, ಹ್ರಾಂ, ಹ್ರೀಂ, ಸಕಲ ಭೂತ ಪ್ರೇತನಾಥಾಯ ಪರಿವಾರ ಪರಮೇಶ್ವರಾಯ ವಷಟ್ ಎಂದು ಕೂಗಿದರು. ನಾವೆಲ್ಲ ಸ್ತಂಭೀಭೂತರಾಗಿ ಅಂತರಿಕ್ಷವನ್ನೇ ನಿರೀಕ್ಷಿಸುತ್ತ ನಿಂತಿದ್ದೆವು, ಅಲ್ಲಿದ್ದ ಒಂದು ಮಾವಿನ ಮರದ ಬುಡದಲ್ಲಿ, "ಏನ್ರಿ! ನಿಮ್ಮ ಭೂತ ಚಕ್ಕರ್!.... ಶುದ್ಧ ಮೋಸ....ಅನ್ಯಾಯವಾಗಿ ನೂರುರೂಪಾಯಿ ತೆತ್ತರಲ್ಲಾ" ಎಂದು, ಉಡುಪಿ ಯುವಕ ಒಳಗಿಂದ ಗಹಗಹಿಸಿದ. ಆಗ, ಅವರು. ಮತ್ತೊಂದು ಸಾರಿ ಮಣ್ಣೆರಚಿದರು. ಮತ್ಸ ಕೂರ್ಮ ವರಾಹಾದಿ ಮುದ್ರಿಕೆಗಳನ್ನು ತೋರಿಸಿ, ವಷಟ್ಕಾರ ಮಾಡಿದರು." ಈಗ? ಎಂದರು.

"ಈ ಕೋಣೆ ಮೂಲೆಯಲ್ಲಿ ಬಿಳಿ ಹೊಗೆಯಂತೆ ಏನೋ ಕಾಣುತ್ತಿದೆ ಹೊರಗಿಂದ ಹೊಗೆ ಬಿಡುತ್ತಿದೀರೋ" ಎಂದ, ಯುವಕ. "ಅದು, ಹತ್ರ ಬರುತ್ತಿದೆಯೇ?" ಎಂದು ಹೊರಗಿಂದಲೇ ಮುದುಕರು ಕೇಳಿದರು. ನಾವು,

ಒಬ್ಬರಕೈಯನ್ನೊಬ್ಬರು ಹಿಡಿದುಕೊಂಡೆವು. ನಾನು ಹಿಡಿದ ಕೈಕಪ್ಪೆಯಂತೆ ತಣ್ಣಗಿತ್ತು.

" ಹುಂ ! ನನ್ನ ಹತ್ರಕ್ಕೆ ಸರಿಯುತ್ತಿದೆ ಮನುಷ್ಯಾಕಾರ ಕೈ....ಕಾಲು ....ಕೈಬೀಸುತ್ತಿದೆ ..." ಎಂಬ ಕೂಗು ಕೇಳಿ ಬಂತು.

" ಯಾರನ್ನು ನೋಡಬೇಕು, ನೀನು, ಈಗ ? " ಎಂದು ಮಂತ್ರಗಾರ ಪ್ರಶ್ನಿಸಿದ. " ನನ್ನ ದೊಡ್ಡಪ್ಪ...ನಾರಾಯಣಾಚಾರ್ರು ! " ಎಂಬ ಉತ್ತರ ಬಂತು. ಯುವಕ ನಿಜವಾಗಿಯೂ ಧೈರ್ಯಸ್ಥ—ಎಂದು ನನ್ನ ಕಿವಿಯಲ್ಲಿ ಒಬ್ಬರು ಕೇಳಿದರು. ಅವರ ಗಂಟಲು ಗಡಗಡನೆ ನಡುಗಿತು. ನಾನು ಅವರ ಭುಜದಮೇಲೆ ಕೈಯಿಟ್ಟು, ಅವರನ್ನು ಹತ್ತಿರಕ್ಕೆಳೆದುಕೊಂಡೆ. " ಹ....ಹ.. ಹ....ವು....ವು....ವು....ದು....ು....ು " ಎಂದೆ.

' ಅಕೊ ! ನೋಡು ! ನಿನ್ನ ದೊಡ್ಡಪ್ಪ. ನಾರಾಯಣಾಚಾರ್ರು ! ನಮ ಸ್ಕಾರಮಾಡು ..ಮೂಢಾ. ... ತಪ್ಪಾಯ್ತು, ಅನ್ನು ! " ಎಂದು, ಮುದುಕರು ಕೂಗಿದರು. ನನ್ನ ಎದೆ ಡಬಡಬನೆ ಬಡಿಯಿತು. ಒಳಗಿಂದ, " ಅಯ್ಯೋ ! " " ಅಯ್ಯೋ ! ' " ಬಿಡಿ, ಬಿಡಿ " ಎಂಬ ಆರ್ತಧ್ವನಿ ಬಂದು, ನಮ್ಮನ್ನೆಲ್ಲ ಬಡಿಯಿತು. ನಾನೂ ' ಅಯ್ಯೋ ! ' ಎಂದು ಕೂಗಿಬಿಟ್ಟೆ. " ದೊಡ್ಡಪ್ಪ ನನ್ನ ಕತ್ತು ಹಿಸುಕುತ್ತಿದಾನೆ ... ಸ್ವಾಮಿ ! ಬಿಡಿಸಿ .. ಬಿಡಿಸಿ.... ಸತ್ತೆ.... ಅಯ್ಯೋ ! ಸತ್ತೆ ! "—ಎಂದು ಗೋಳಾಡಿದ, ಯುವಕ. ಧೊಪ್ ಎಂಧು ಆ ಕೋಣೆಯೊಳಗೆ ಯಾವುದೋ ಬಿತ್ತು .

ಮುದುಕರು ಬಾಗಿಲು ತೆರೆದರು. ಯಾರೋ ಒಬ್ಬರು ದೀಪ ತಂದರು. ನಾವೆಲ್ಲ ಒಳಗೆ ನುಗ್ಗಿದೆವು. ಪಾಪ. ಆತ ಜ್ಞಾನತಪ್ಪಿ ನೆಲದಮೇಲೆ ಬಿದ್ದಿದ್ದ. ಮುಖದಮೇಲೆ ನೀರೆರಚಿದೆವು. ನಿಧಾನವಾಗಿ ಕಣ್ಣರಳಿಸಿ ಎದ್ದು ಕೂತ ಕೂತಕೂಡಲೇ, ಆತನಲ್ಲಿ ಭಯಂಕರ ಕೋಪ ಪ್ರಜ್ವಲಿಸಿತು, ಕಣ್ಣು ಕಿಡಿ ಕಾರಿತು....

" ಎಲ್ಲಿ ! ಆ ಮಾಟಗಾರ ? ಎಲ್ಲಿ ಆ ಮುದುಕ ? ಭೂತ ತೋರಿಸುತ್ತೇನೆ ಅಂದವನು, ಅದರ ಕೈಯಿಂದ ನನ್ನ ಕತ್ತು ಕಿವಿಚಿಸಿದ ಕಳ್ಳ ! " ಎಂದು ಆರ್ಭಟಿ ಸುತ್ತ ಆತ ಅಲ್ಲೆಲ್ಲ ಹುಡುಕಿದ ..ಮುದುಕ ಅಲ್ಲಿ ಇರಲಿಲ್ಲ. " ಎಲ್ಲಿ, ಎಲ್ಲಿ ಅವನು ? " ಎಂದು ಕೂಗುತ್ತ, ಯುವಕ ರಸ್ತೆಕಡೆ ಓಡಿದ !

ನಾವು ಅಲ್ಲೇ ಬಹಳ ಹೊತ್ತು ನಿಂತಿದ್ದೆವು ....“ ಪರವಾ ಇಲ್ಲ ! ನಮ್ಮಿಂದ ದೋಚಿದ ಹಣಕ್ಕೆ, ಒಳ್ಳೇ ತಮಾಷೆ ತೋರಿಸಿದರಲ್ಲಾ, ಇಬ್ಬರೂ ಸೇರಿಕೊಂಡು " ಎಂದು ಸಮಾಧಾನಪಡುತ್ತಾ, ಮಲಗಿದೆವು. ಆದರೂ, ನಿದ್ದೆ ಬರಲಿಲ್ಲ—

—ನೀಲೇಶ್ವರ.

ತಾಲು ಅಜ್ಜೀ ಗೇಲ್ತಿನಿ !

(ಶಿಸುಗೀತ)

ಅಜ್ಜಿ ! ಅಜ್ಜೀ !
ಅಮ್ಮ ! ಅಮ್ಮ !
ಕತ್ತಿ ತೆಕೊಂದು ಜುತ್ತಿಕೊನೆ
ಕತ್ತಿ ಸಿಕೊಲ್ತಾಲಜ್ಜೀ ॥ ೧ ॥

ಅಜ್ಜಿ ! ಅಜ್ಜೀ !
ಅಮ್ಮ ! ಅಮ್ಮ !
ನಿಂಗೆ ಚಮಾಜಕ್ಕೋಗ್ತಿನಿ
ಅಂತೇಲಿ ಚಿನೀಮಾಕ್ಕೆ
ಓಗ್ತಾಲಜ್ಜೀ ॥ ೨ ॥

ಅಜ್ಜಿ ! ಅಜ್ಜೀ !
ಅಮ್ಮ ! ನೀಗುದೀಗೋದಾಗ
ನಿಂಚಾಚುವೆ ದಬ್ಬೀಲ್ಲಿರೂ
ಕಾಚು ತೆಕೊಂದಿದಾಲಜ್ಜ ॥ ೩ ॥

ಅಜ್ಜಿ ! ಅಜ್ಜೀ !
ಅಮ್ಮ ! ದಿನಾಲೂ -
ಅಪ್ಪಂಕೂಡೆ—ಅಮ್ಮ
ಜಗ್ಲಾ ಆತ್ತಾಲಜ್ಜೀ ॥ ೪ ॥

ಅಜ್ಜಿ ! ಅಜ್ಜೀ !
ಅಮ್ಮ ತಾಲಜ್ಜೀ ಗೇಲ್ತೀನಿ ಅಂದ್ಲೆ
"ನಿನ್‌ಬಜ್ಜಿಮಾತ್ತೀನಿ !"
ಅಂತಾಲಜ್ಜಿ ! ॥ ೫ ॥

—ಬಿ. ಸ್ರಾ.

ನನಗೆ ರೈಲು ತಪ್ಪಿದ್ದು

"ನಿಮ್ಮ ಪ್ರಯಾಣ ನಿಲ್ಲಿಸಿ!" "ಪ್ರಯಾಣ ಮಾಡಬೇಡಿ" ಎಂದು ಅಪಶಕುನ ನುಡಿದು, ನಮ್ಮನ್ನು ರೈಲಿನವರು ಹಿಂದಕ್ಕಟ್ಟುತ್ತಿರುವಾಗ, ಅಲ್ಲಲ್ಲಿ ಅನಾಹುತಗಳನ್ನು ತಂದೊಡ್ಡುತ್ತಿರುವಾಗ, ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡೇ ರೈಲು ಹತ್ತಬೇಕಾಗಿದೆ. ಅಂಥದ್ದರಲ್ಲಿ, ಗಂಟು ಮೂಟೆಗೆ ಜಾಗವೆಲ್ಲಿ? ಟ್ರಂಕು ಬೆಡ್ಡಿಂಗು ಮುಂತಾದ ಸಾಮಗ್ರಿಗಳಿದ್ದರೆ, ದಾರಿ ಪಕ್ಕದಲ್ಲಿ ನಿಂತು ಲಾರಿ ಕಾಯುವುದೇ ಮೇಲು. ಕೈ ಬೀಸಿಕೊಂಡು ಕಾಲಾಡಿಸಿಕೊಂಡು ರೈಲಿನೊಳಕ್ಕೆ ನುಗ್ಗುವುದೇ ಮಹಾಕಷ್ಟವಾಗಿರೋವಾಗ........

ಆ ಮನುಷ್ಯ ಅವತ್ತು?........ಪೂನಾ - ಗಾಡಿ ಟ್ರೈನಲ್ಲಿ.... ಅಯ್ಯೋ! ಅಯ್ಯೋ! ಭಾರಿ ಆಳು. ಆ ಗೂನುಬಾಹು! ಕೊಂಚ ಬಾಗಿದ ಬೆನ್ನು. ಕಟ್ಟು-ಮಸ್ತು. ಟ್ರಂಕೂ ಕೂಡ, ನಾಲ್ಕೂವರೆ ಅಡಿ × ಎರಡೂವರೆ ಅಡಿ × ಎರಡಡಿ —ಗಾತ್ರ. ಅದರೊಳಗೆ ಏನು ತುಂಬಿದ್ದನೋ, ಮಹಾರಾಯ? ರೇಷ್ಮೆಯೋ, ರೇಡಿಯವೋ, ಬೆಲ್ಲವೋ, ಬಟ್ಟೆಯೋ,........ಜಟಕಾದಿಂದ ಇಳಿಯುತ್ತಲೂ, ಪೆಟ್ಟಿಗೆನೋಡಿ ಹಾರಿ ಬಂದ ಪೋರ್ಟರುಗಳನ್ನೆಲ್ಲ ಒಂದೇ ಒಂದು ಗರ್ಜನೆಯಿಂದ ದೂರೀಕರಿಸಿದ. ಎರಡು ಕೈಗಳನ್ನೂ ಅದರ ಅಡಿಗೆ ತುರುಕಿ, ಅದನ್ನು ಜಗ್ಗಿಸಿ, ಎತ್ತಿ, ಬಲಭುಜದಮೇಲೆ ಉದ್ದುದ್ದವಾಗಿ, ಹೊತ್ತ. ಮೈಯ ಬಲಭಾಗ ಕೊಂಚ ತಗ್ಗಿತು. ಹಾಗೆಯೇ, ಕ್ಯೂನಿಂತಾಗ, ಆತನ ಮುಖದಲ್ಲಿ ನಾಚಿಕೆಯಾಗಲಿ, ಬೇಜಾರಾಗಲಿ, ಸುಸ್ತಾಗಲಿ, ಕಾಣಿಸಲೇ ಇಲ್ಲ. ಎಡಗೈ ಮೂಲಕ ಎಡ ಜೋಬಿನೊಳಗಿಂದ ಒಂದು ಬೀಡಿಯನ್ನು ತೆಗೆದು, ಹಿಂದಿನವನ ಬಾಯಿ ಬೀಡಿಯಿಂದ ಬೆಂಕಿ ಬೇಡಿ, ಅದನ್ನು ಹಚ್ಚಿ, ಹೊಗೆ ಉಗುಳುತ್ತಾ, ನಿಂತಿದ್ದ. ಒಂದುಸಲ ಮಾತ್ರ, ಬೀಡಿ ಕೆಳಗೆ ಬಿದ್ದಾಗ, ಹೆಗಲಮೇಲಿನ ಟ್ರಂಕಿನ ನೆನಪಿಲ್ಲದೆ, ಆತ ಛಟಕ್ಕನೆ ಕೆಳಕ್ಕೆ ಕುಸಿದು ಅದನ್ನು ಮತ್ತೆ ಎತ್ತಿಕೊಂಡ. ಆಗ, ಮುಂದೆಯೂ ಹಿಂದೆಯೂ ನಿಂತಿದ್ದ ಜನರ ತಲೆಯಮೇಲೆ ಟ್ರಂಕು ತಗುಲಿ ಸಿಡಿಲು ಬಡಿದಂತಾಯಿತು. ಅವರ ತಲೆಯೊಳಗೆ ನಕ್ಷತ್ರಗಳು ಮಿಂಚಿದುವು. ಅವರ ಮಂಡಿಗಳೂ ಇದ್ದಕ್ಕಿದ್ದ ಹಾಗೆ ಮಡಿಸಿಕೊಂಡು ಸಡಿಲವಾದುವು. ಅವರೂ, ನೆಲದಮೇಲೆ ಕೂತರು. ತನ್ನಿಂದಾದ ಅನಾಹುತದ ಅರಿವೇ ಇಲ್ಲದೆ, ಆತ ಬೀಡಿ ಹೀರುತ್ತ ನಿಂತಿದ್ದ. ಆ ಟ್ರಂಕು ಮಾತ್ರ ಆತನ ಹೆಗಲಮೇಲೆ

ಮಲಗಿ ಮರ್ಝಾ ಮಾಡುತ್ತಿತ್ತು.... ..ಅದನ್ನು ಪ್ರೀತಿಯಿಂದ ಹೊತ್ತು, ಆತ ಕಿಟಕಿಯ ಸಮೀಪ ಹೋಗಲಾರದೆ, ದೂರದಿಂದಲೇ ಕೈನೀಡಿ ಟಿಕೆಟ್ಟು ಪಡೆದ.

ಎಲ್ಲೋ, ಠಣ್ ಠಣ್, ಎಂಬ ಗಂಟಾನಾದವಾಯಿತು. ತಮ್ಮದೇ ಅದು, ತಮ್ಮ ಗಾಡಿಯೇ ಹೊರಡುತ್ತಿರುವುದು, ಎಂಬ ಹುಚ್ಚು ಎಲ್ಲರನ್ನೂ ಹಿಡಿಯಿತು. ಎಲ್ಲರೂ ಏಣಿ ಕಡೆ ಓಡಿದರು. ಟ್ರಂಕು ಹೊತ್ತ ಸೈಂಧವನೂ ಧಾವಿಸಿದ. ನುಗ್ಗಿದ ಭರದಲ್ಲಿ ಅರೆತೆರೆದಿದ್ದ ತಂತಿ ಬಾಗಿಲನ್ನು ಬಗ್ಗಿಸಿ ಕತ್ತರಿಸಿಕೊಂಡೇ ಹೋಯಿತು, ಆ ಟ್ರಂಕು! ಮೆಟ್ಟಿಲುಗಳನ್ನು ಹತ್ತುವಾಗ, ಆತ ಓಡಿದ ರಭಸದಲ್ಲಿ, ಇತರರಿಗೆ ಎಚ್ಚರಿಕೆ ತೆಗೆದುಕೊಳ್ಳಲು ಪುರಸತ್ತೇ ಸಿಗಲಿಲ್ಲ. ಉದ್ದಕ್ಕೂ ಗೂಡೆಗಳು, ರುಮಾಲುಗಳು, ತಂಬೂರ ಬುರುಡೆಗಳು, ಹೊಲ್ಡಾಲುಗಳು— ಇವುಗಳನ್ನು ಉರುಳಿಸುತ್ತಲೇ ಹೋದ. ಅನಂತರ, ಕೊಂಚದೂರ ಸಮಮಾರ್ಗದಲ್ಲಿ ಓಟ, ಅಲ್ಲಿ ಹೆಚ್ಚು ಉರುಳಾಟಗಳಾಗಲಿಲ್ಲ. ಆದರೆ, ಆಚೆಕಡೆ ಇಳಿಯುವಾಗ, ಆತನ ಹೆಗಲಮೇಲಿದ್ದ ಟ್ರಂಕು ಒಬ್ಬನ ಖಾಲಿ ಹಾಲಿನ ಡಬ್ಬವನ್ನು ಕೆಳಕ್ಕೆ ಕೆಡವಿತು. ಅದು ಡಬಡಬಡಬವೆಂದು ಉರುಳಿದಾಗ, ಮೂರು ನಾಲ್ಕು ಮಕ್ಕಳು ಗಾಬರಿಗೊಂಡು ಚೀರಿ ಬಿದ್ದು ಕಾಲು ಉಳುಕಿಸಿಕೊಂಡರು. ಅಷ್ಟರೊಳಗೆ, ಹಾಳು ಟ್ರಂಕು ಒಂದು ಹೆಂಗಸಿನ ತಲೆಮೇಲಿಂದ ಬಟ್ಟೆಗಂಟೊಂದನ್ನು ಕೆಳಕ್ಕೆ ತಳ್ಳಿತು. ಅದರೊಳಗಿದ್ದ ಅಲ್ಪಸ್ವಲ್ಪ ಅಕ್ಕಿ ಜೋಳ ಎಲ್ಲವೂ ಮೆಟ್ಟಲಮೇಲೆ ಚೆಲ್ಲಿತು.... ಆಕೆ ಆತನನ್ನು ಅಚ್ಚಕನ್ನಡದಲ್ಲಿ ಬೆಚ್ಚಗೆ ಬೈದಳು.

ಜಟಕಾದಿಂದ ಇಳಿದಾಗಿನಿಂದ, ನಾನು ಆ ಜರಾಸಂಧನನ್ನೇ ಗಮನದಲ್ಲಿಟ್ಟಿದ್ದೆ. ಒಂದು ಪೆಟ್ಟಿಗೆ ತುದಿಯಿಂದ ಎಷ್ಟು ಜನರ ಮೂತಿ ತಿವಿಯುತ್ತಾನೆ — ಎಂದು ರೇಗುತ್ತಾ ಇದ್ದೆ. ಕಡೆಗೆ, ನನ್ನ ತಾಳ್ಮೆತಪ್ಪಿತು. "ಹೇಯ್! ಹೇಯ್!" ಎಂದು ಕೂಗುತ್ತಾ ಓಡಿಹೋಗಿ, ಅವನ ಮುಂದೆ ನಿಂತೆ. "ಬುದ್ಧಿಗಿದ್ದಿ ಇದೆಯೋ ಇಲ್ಲವೋ, ನಿನಗೆ?" ಅಂತ ಕೇಳಿದೆ ಆತ, ಒಂದು ಹೆಜ್ಜೆ ಹತ್ರಕ್ಕೆ ಬಂದ. ನನ್ನ ಹಣೆಗೇನೋ ಬಡಿಯಿತು..... ನಾನು ನೆಲಕ್ಕೆ ಬಿದ್ದೆ.... ಪೂನಾ ಗಾಡಿ ಹೊರಟೇ ಬಿಟ್ಟಿತ್ತು—ನಾನು ಏಳುವುದರೊಳಗೆ. . ....

—ಜಾಟಾಳಿ.

ಕಮಿಟಿ

'ಕಮಿಟಿ'—ಎನೆ ಕುಣಿದಾಡುವುದೆನ್ನೆದೆ !
'ಕಮಿಟಿ' ಎನೆ ಕಿವಿ ನೀಳುವುದು !
ವೋಟಿಗೆ ಕೈಮೇಲೇಳುವುದು !
ಟಿ. ಏ. ಬಿಲ್ಲನು ಕಳಿಸುವ ಜಾಯಲಿ
ಪಕ್ಕನೆ ಲೇಖನಿ ನೆಗೆಯುವುದು !

ಆದರಲು ನಾನು ! ಇದರಲು ಮೆಂಬರು !
ಬೆಳಗೂ ಕಮಿಟಿ ! ಬೈಗೂ ಕಮಿಟಿ !
ಅಲ್ಲೂ ನಾನೇ ! ಇಲ್ಲೂ ನಾನೇ !
ಬೆಚ್ಚಗೆ ಕುರ್ಚಿಲಿ ಆಕಳಿಸುತ್ತಲೆ
ಖರ್ಚಿಗೆ ಹಿಡಿ ಹಿಡಿ ಕಾಸನು ತುಂಬಿಸಿ
ಕಾಕಾಪುಡಿಯುತ ಕಮಿಟಿಲಿ ಕುಳಿತರೆ,
ಕಮಿಟಿ ! ಕಮಿಟಿ ! ಹಾ ! ಹೋ ! ಕಮಿಟಿ !

ಕಮಿಟಿಲಿ ಚಾ ಬಲು ಬಿಸಿ ಅಹುದು,
ಕಮಿಟಿಲಿ, ಹಾ, ಬಲು ಖುಷಿಯಹುದು.
ಕಮಿಟಿಯೆ ಇಲ್ಲದೆ ದಿನವನು ಕಳೆದಡೆ
ನಿದ್ದೆಯು ನಾಲಗೆ ಮಾತಾಡುವುದು !
ಬುರುಡೆಯು ಗಾಳಿ ಚೀರಾಡುವುದು !

ಅರೆಬಟ್ಲೆರದಲಿ ಆಲ್‌ರೈಟ್ ಎನ್ನುತ—
ಅರೆಬೆತ್ತಲೆಯಲಿ ನಡುಗುವ, ಪಾಪ,
ನಮ್ಮೊಡ ಹುಟ್ಟಿಗೆ ಜೈ, ಜೈ, ಜೈ—
ಕೂಗಲು ಕಮಿಟಿಯೆ ನಮಗನುಕೂಲವು !—

ಸಂಜೆ ಗೋಪಾಳ

“ ಕಮಲೂ ! ಕಮಲೂ ! ಬಾಗಿಲು ಹಾಕಿಕೊಳ್ಳಿ- ಆಗಲೇ ಎಂಟು ಗಂಟೆ ಆಯಿತು. ಇನ್ನು ಸಂಜೆ ಗೋಪಾಳದವ ಬಂದು ಕಾಟ ಕೊಡುತ್ತಾನೆ. ಇನ್ನು ‘ ಇವರೂ ’ ಮನೆಯಲ್ಲೇ ಇದಾರೆ. ಅವನು ಬಂದರೆ ಇನ್ನು ಅವನ ಹತ್ತಿರವೇ ಚಕ್ಕಂದ ಆಡುಕ್ಕೆ ಶುರುಮಾಡಿಬಿಡ್ತಾರೆ ಒಂದು ವಾರದಿಂದ ಅವನ ಮಾತೇ ಇವರಿಗೆ ’’—

ತಾಯಿ ತನ್ನ ಹಿರಿಯ ಮಗಳಿಗೆ ಈ ಹುಕುಂ ಕೊಟ್ಟದ್ದು. ರಾಯರೂ ಅಲ್ಲಿಯೇ ಪಕ್ಕದ ಮನೆ ಪೇಪರು ನೋಡುತ್ತಾ ಕುಳಿತಿದ್ದರು.

ಅಷ್ಟುಹೊತ್ತಿಗೆ ಯಾರೋ ಬಾಗಿಲಲ್ಲಿ ‘ ಸಂಜೆ ಗೋಪಾಳಾಮ್ಮ ! ಸಂಜೆ ಗೋಪಾಳ. ಏನಾದರೂ ಮಿಕ್ಕಿದ್ದು ಕೊಡೀಮ್ಮಾ’ ಎಂದು ಕೂಗಿದರು

ರಾಯರ ಕಿವಿ ನೆಟ್ಟಗಾಯ್ತು. ‘‘ ಅಲ್ಲ ಕಣೇ, ಸಂಜೆ ಗೋಪಾಳದವನ ಮಾತು ನಾನಾಡುತ್ತೀನಿ ಎಂದು ರೇಗ್ತೀಯಲ್ಲ ನಿನ್ನೆ ಶೇಕದಾರ್ ಸೀನಪ್ಪ ಏನು ಹೇಳಿದ ಗೊತ್ತೆ •ಮೂರು ವಾರದಿಂದ ಇವನ ಹತ್ತಿರ ಒಂದು ಒಪ್ಪಂದ ಮಾಡಿಕೊಂಡಿದ್ದಾನಂತೆ. ಇವನಿಗೆ ಬೇಕಾದ ಲವಾಜಮೆ ಕೊಟ್ಟುಬಿಡೋದು ಅವನ ಜೋಳಿಗೆಯಲ್ಲಿದ್ದದ್ದೆಲ್ಲಾ ದಿನಾಲೂ ತಾನು ಇಸುಕೊಂಡು ಬಿಡುವುದು. ಇದು ಯಾಕೆ ಹೀಗೆ ಮಾಡಿದೆ ಎಂದು ನಾನು ಕೇಳಿದೆ—‘‘ ಅಯ್ಯೋ ! ನಮ್ಮನೆ ಯಲ್ಲಿ ಏನುತಾನೆ ಅಡಿಗೆ ಮಾಡುತ್ತಾರೆ. ಒಂದೂ ರುಚಿ ಇಲ್ಲ. ವೈವಿಧ್ಯತೆ ಇಲ್ಲ. ಜೋಳಿಗೆ ಊಟ ಬಲು ರುಚಿ ಎಂದ ನಾವೂ ಒಂದು ದಿನ ನೋಡೋಣ ಇರು ’’

‘‘ ಇದೇನು ಬಂತು ಅಂದರೆ ಈ ಮುದಿವಯಸ್ಸಿನಲ್ಲಿ ಈ ಚಪಲ ದೇವರು ಕೊಟ್ಟದ್ದು, ಮನೇಲಿ ಇದ್ದಿದ್ದು ತಿನ್ನದೆ, ಅವರಿವರ ಜೋಳಿಗೆ ಊಟ ರುಚಿ ಅದನ್ನೇ ತಿನ್ನುತ್ತೇನೆ ಎಂದು ಸಂಜೆ ಗೋಪಾಳದವನನ್ನು ಬಯಸುತ್ತೀರಿ ನೋಡಿದೋರು ನಗುಲ್ಲವೇ ಅಂದ್ರೆ. ’’

‘‘ ಈ ಹೊತ್ತಿನಲ್ಲಿ ಯಾರು ನೋಡುತ್ತಾರೆಯೇ ! ಅಷ್ಟೇ ಅಲ್ಲದೇ, ಶೇಕ ದಾರ ಸೀನಯ್ಯ ಹಾಗಿರಲಿ, ಮಾಮಲೇದಾರ ಮರುಳಯ್ಯ ಕೂಡ ಈ ಜೋಳಿಗೆ ಊಟ ವಾರಕ್ಕೆರಡಾವರ್ತಿ ಗಿಟ್ಟಿಸುತ್ತಾನಂತೆ ಸಾಹುಕಾರ ಭರಮಪ್ಪ ಕೂಡ ಇವನ ಕಕ್ಷಿಗಾರನಂತೆ. ಈ ಗೋಪಾಳದವನು ಅರಮನೆ ಇಂದ ಕಿರುಮನೆ ತನಕ ಹೋಟಲುಗಳಿಂದ, ಕೋಟೆ ಮನೆಗಳ ತನಕ ಎಲ್ಲೆಲ್ಲೂ ಸುತ್ತಿ, ಬಗೆಬಗೆಯ ತಿನ್ನುವ ಪದಾರ್ಥಗಳನ್ನು ಗಿಟ್ಟಿಸುತ್ತಾನಂತೆ.

ಇಂಥಿಂಥವರ ಮನೆಯಲ್ಲಿ ಇಂಥಿಂಥ ಭಿಕ್ಷ ಹಾಕಿದರು ಎಂದು ಊರಲ್ಲೆಲ್ಲಾ ಇವನು ಹೇಳಿಕೊಂಡು ಬರುತ್ತಾನೆ ಎಂದು ಭಿಕ್ಷ ಹಾಕುವವರೂ ಕೂಡ ರುಚಿಯಾದ ಶುಚಿಯಾದ ವಸ್ತುಗಳನ್ನೇ ಇವನ ಜೋಳಿಗೆಗೆ ತುಂಬುತ್ತಾರಂತೆ— ತಮ್ಮ 'ಅದಬ್ಬಿ 'ಗೋಸ್ಕರ—

ಹೀಗಿರುವಾಗ ಒಂದು ದಿವಸ ನೋಡಿಯೇ ಬಿಡೋಣ ಕಣೆ ಸ್ವಲ್ಪ ಇರು ಇವತ್ತು ಕರೀತೇನೆ''

ಅಷ್ಟುಹೊತ್ತಿಗೆ ಸಂಜೆ ಗೋಪಾಳದವನ ಕೂಗು ರಸ್ತೆಯ ಆಚೀಕಡೆ ಕೇಳಿಸುತ್ತಿತ್ತು. ,ರಾಯರು ಹೊರಗೆ ಹೋಗಿ ಅವನನ್ನು ಕೂಗಿದರು ಆತನೂ ಬಂದ, 'ಬಾಪ್ಪ ಬಾ. ಸೇಕದಾರ್ ಸೀನಯ್ಯನವರು ನಿನ್ನ ವಿಚಾರ ಹೇಳಿದರು ನನಗೆ. ಇವತ್ತು ರಾತ್ರಿ ಇಲ್ಲೇ ಊಟಮಾಡು ನಿನ್ನ ಜೋಳಿಗೆದನ್ನೆಲ್ಲಾ ನನಗೆ ಕೊಡು, ಎಂದರು ರಾಯರು,

'ಅಯ್ಯೋ, ರಾಯರೇ ಬಡವನ ಜೋಳಿಗೆ ಅದರಲ್ಲೇನಿರುತ್ತೆ ಭಿಕ್ಷೆ ಬೇಡಿದ್ದು ಮಾತ್ರ. ಆದರೂ ನೀವು ಹೊಟ್ಟೆಗೆ ಹಾಕುತ್ತೀನೆ ಎಂದರೆ ನಾನು ಹೇಗೆ ಬೇಡ ಎನ್ನಲಿ' ಎಂದು ಹೇಳಿದ, ನಮ್ರತೆಯಿಂದ, ಸಂಜೆ ಗೋಪಾಳದವನು.

ರಾಯರು ಮನೆಯಾಕೆಗೆ ಹೇಳಿದರು. 'ಇವನಿಗೆ ವರಾಂಡದಲ್ಲಿ ಎಲೆ ಹಾಕಿ, ಬಡಿಸು. ಒಂದು ಪಾತ್ರೇಲಿ ಇವನು ತಂದಿರುವ ಜೋಳಿಗೆಯನ್ನು ಖಾಲಿಮಾಡಿಕೋ' ಎಂದು.

ಸಂಜೆ ಗೋಪಾಳದವನು ಉಂಡು ಹೋಗಿದ್ದೇ ತಡ. ರಾಯರು ಜೋಳಿಗೆ ಸಾಮಾನನ್ನು ಎಲೆಗೆ ಬಡಿಸಿಕೊಂಡರು, ಆಹಾ! ದಿಟವಾಗಲೂ ಭಿಕ್ಷದ ಊಟ ಹಬ್ಬದೂಟವೇ ಸರಿ! ಮೂರು ಬಗೆ ಪಲ್ಯ, ನಾಲ್ಕು ಬಗೆ ಹುಳಿ, ಎರಡು ಉದ್ದಿನ ವಡೆ, ಒಂದು ಒಬ್ಬಟ್ಟು, ಮೂರು ಚೂರು ಪೂರಿ, ಘಮಘಮಿಸುವ ಸಾಗು ಸ್ವಲ್ಪ, ಒಂದು ಹೋಳು ಚಿಗುಳಿ ಉಂಡೆ.

ಕೂಗಿದರು ರಾಯರು ಹೆಂಡತಿಯನ್ನು 'ನೋಡಿದೆಯೇನೆ' ನೀನು ಒಂದು ಚೂರು ತಿನ್ನು ಎಷ್ಟು ರುಚಿಯಾಗಿದೆ ನೋಡು.' ಎಂದರು.

ಆಕೆಯೂ ತಿಂದರು. ಬಾಯಿ ಚಪ್ಪರಿಸಿಕೊಂಡರು, ಮದುವೆ ಊಟ ಎಲ್ಲಾ ಜ್ಞಾಪಿಸಿಕೊಂಡರು ಸ್ವಲ್ಪ ಮನಸ್ಸಿನಲ್ಲಿಯೇ ಮೆಲುಕು ಹಾಕಿದರು " ಹೌದೂ ಅಂದ್ರೆ ವಾರಕ್ಕೆರಡು ದಿನ ನಾವೂ ಇದನ್ನು ಸರ್ತಿಮಾಡಿಕೊಳ್ಳೋಣ. ಅಷ್ಟಲ್ಲದೇ ಊರಿನವರೆಲ್ಲಾ ಇವನ ಗಿರಾಕಿಗಳೇ ಆಗುತ್ತಾರೆಯೇ!''

★ ★ ★ ★

ನಾಲ್ಕು ದಿನಗಳಾದಮೇಲೆ ತಿರುಗಿ ಆ ರಸ್ತೆಯಲ್ಲಿ ಗೋಪಾಳದವನು ಕೂಗಿದ. ಇದಕ್ಕಾಗಿಯೇ ಕಾದಿದ್ದ ರಾಯರು ಓಡಿದರು ವರಾಂಡಾ ಬಾಗಿಲ ತೆಗೆದುಕೊಂಡು. 'ಬಾಪ್ಪಾ ಬಾ ಸಂಜಗೋಪಾಳಪ್ಪ ಬಾ' ಎಂದು ಪ್ರೀತಿ

ಯಿಂದ ಕರೆದರು. ಹಿಂದಿನ ಸರ್ತಿ ಮಾಡಿದ್ದನ್ನೇ ಈ ಸರ್ತಿ ಕೂಡ ಮಾಡು ಎಂದರು.

ಸಂಜೆ ಗೋಪಾಳದವನು ಮುಖ ತಗ್ಗಿಸಿದ 'ಸ್ವಾಮಿ' ಅಂದ. 'ರಾಯರೇ' ಎಂದು ಶುರುಮಾಡಿದ. 'ಯಜಮಾನರೇ' ಎಂದು ಹೇಳಿ ಮುಂದುವರಿಸಲು ಪ್ರಯತ್ನಿಸಿದ.

ಕಡೆಗೆ ಉಗುಳಿನುಂಗಿಕೊಂಡು, 'ನೋಡೀ ಮಹಾರಾಯರೇ! ಈ ಜೋಳಿಗೆಯಿಂದ ನಮ್ಮ ಮನೆಯಲ್ಲಿ ಎಲ್ಲರೂ ಊಟಮಾಡಬೇಕು. ಇದನ್ನೆಲ್ಲಾ ನಿಮಗೆ ಕೊಟ್ಟುಬಿಟ್ಟು, ನಾನು ಮಾತ್ರ ಹೊಟ್ಟೆ ತುಂಬ ಉಂಡು ಹೋದರೆ ಮನೆಯವರಗತಿ ಹೇಗೆ! ಮೊದಲ ಸಾರಿ ನೀವು ಹೇಳಿದಾಗ ಒಪ್ಪಿಕೊಂಡೆ ದೊಡ್ಡವರ ಮಾತು ತೆಗೆದುಹಾಕಬಾರದು ಎಂತ, ಇದೇ ಮಾಮೂಲಾದರೆ, ಮನೆಯವರ ಹೊಟ್ಟೆಪಾಡು ಹೇಗಪ್ಪಾ ಎಂದು ಯೋಚಿಸಬೇಕಾಗಿದೆ' ಎಂದು ಸಾವಧಾನವಾಗಿ ಹೇಳಿದ.

* * *

'ಇಷ್ಟಕ್ಕೇ ಏನು ಯೋಚನೆಯಪ್ಪಾ, ನಿನ್ನ ಜೋಳಿಗೆ ಇಲ್ಲಿ ಖಾಲಿ ಮಾಡು. ತಿರುಗಿ ನಾವು ಭರ್ತಿಮಾಡಿಕೊಡುತ್ತೇವೆ' ಎಂದರು ರಾಯರು.

'ಅದಾಗುವುದಿಲ್ಲ ಸ್ವಾಮಿ, ಅಮ್ಮಾವ್ರು ತಮ್ಮ ಕೈಯಿಂದಲೇ ಅಡಿಗೆ ಮಾಡಿದ್ದನ್ನೆಲ್ಲಾ ನಮ್ಮನೆಗೆ ತೆಗೆದುಕೊಂಡು ಹೋದರೆ ಚೆನ್ನೇ! ಅಲ್ಲದೆ ನಮ್ಮನೆಯವರಿಗೆ ಈ ಜೋಳಿಗೆ ಊಟದ ರುಚಿ ಹತ್ತಿದೆ. ಆದರೆ ಒಂದು ಕೆಲಸ ಮಾಡಿ. ಅಕ್ಕಿ ಬೇಳೆ ಲವಾಜಮ ಕೊಡಿ ನಮ್ಮನೆಗೆ ಹೋಗಿ ಅವರ ಕೈಲೇ ಅಡಿಗೆಮಾಡಿಸಿ ಹೊಟ್ಟೆ ಹೊರೆದುಕೊಳ್ಳುತ್ತೇವೆ.'

'ಓಹೋ! ಅದಕ್ಕೇನು? ಭೇಷಕ್ ಎಂದು ರಾಯರು ಒಪ್ಪಿದರು. ಇವನ ಜೋಳಿಗೆ ಖಾಲಿ ಮಾಡಿಸಿದರು. ಅಕ್ಕಿ ಬೇಳೆ ಉಪ್ಪು ಹುಣಿಸೇಹಣ್ಣು ತುಂಬಿದರು.

ಅಂದು ರಾಯರ ಪಾಲಿಗೆ ಬಂದದ್ದು ಪಂಚಭಕ್ಷ ಪರಮಾನ್ನ.

* * * *

ಕೊನೆಕೊನೆಗೆ ಇದು ಏನಾಯಿತು ಗೊತ್ತೇ? ಒಂದೊಂದು ಮನೆಯವರೂ ಇದನ್ನೇ ದಿನಾಲೂ ಮಾಡಲು ಆರಂಭಿಸಿದರು. ಮನೆಯಿಂದ ಅಕ್ಕಿ ಬೇಳೆ ಎಲ್ಲಾ ಕೊಡುವುದು. ಇವನ ಜೋಳಿಗೆ ಊಟ ತೆಗೆದುಕೊಳ್ಳುವುದು. ಕಡೆ ಕಡೆಗೆ ತಿಂಗಳು ಮೊದಲಾಗುತ್ತಲೂ, ರೇಷನ್‌ಕಾರ್ಡು, ತಿಂಗಳಿಗೆ ಇಷ್ಟು ಅಂತ, ಇವನ ಕೈಗೆ ಕೊಟ್ಟುಬಿಡುವುದು. ಇವನು ಜೋಳಿಗೆ ಊಟ ದಿನಾಲೂ ಇವರಿಗೆ ಹಂಚುವುದು. ದೊಡ್ಡ ವ್ಯಾಪಾರಕ್ಕೇ ಇಟ್ಟುಕೊಂಡುಬಿಡ್ತು. ಯಾರನ್ನು ಕೇಳಿದರೂ, ಸಂಜೆಗೋಪಾಳನ ಜೋಳಿಗೆ ಊಟವೇ ನಮಗೆ, ಎನ್ನುವರೇ.

ಆದರೆ ಯಾರಪ್ಪಾ ಇವನ ಜೋಳಿಗೆ ತುಂಬುವರು ಎಂದು ಹುಡುಕಿದರೂ ಒಬ್ಬರು ಇಬ್ಬರೂ ಸಿಕ್ಕುತ್ತಿರಲಿಲ್ಲ. ನಮ್ಮ ಹೊಟ್ಟೆ ತುಂಬಿದರಾಯ್ತು ಜೋಳಿಗೆ

ಮೂಲ ಪತ್ತೆ ಹಚ್ಚುವ ಕೆಲಸ ನಮಗೇಕೆ ಎಂದು ಎಲ್ಲರೂ ಕಣ್ಣುಮುಚ್ಚಿಕೊಂಡು ತಟ್ಟೆ ಮುಂದೆ ಕೂತು ಕೀರು ಕುಡಿಯುತ್ತಿದ್ದರು.

ಎಲ್ಲೆಲ್ಲಿ ನೋಡಿದರೂ ಸಂಜೆಗೋಪಾಳನ ಹೆಸರೇ. ಅವನ ಹೆಸರಿಟ್ಟು ಒಂದು ರಸ್ತೆಯನ್ನೇ ನಿರ್ಮಿಸಿದರು. ಒಂದು ಕೇರಿಗೆ, ಅವನ ಹೆಸರಿಟ್ಟರು. ಬರಗಾಲದಲ್ಲಿ ನಮ್ಮಮನೆಗೆ ಬಂದ ದೇವರು ಎಂದು ಪೂಜಿಸಲಾರಂಭಿಸಿದರು ಇವನ ಪ್ರತಿಮೆಯನ್ನಿಟ್ಟು ಹೂವು ಕೂಡ ಹಾಕಿದರಂತೆ ಕೆಲವರು. ಇನ್ನೇನು ಇವನಿಗೊಂದು ಗುಡಿ ಕಟ್ಟಿಸಬೇಕು ಊರಲ್ಲಿ ಎಂದು ಜನರು ಆಲೋಚಿಸುತ್ತಿದ್ದರಂತೆ—

— ಅಷ್ಟರಲ್ಲೇ ಅಧಿಕಮಾಸ ಬಂತು —

ತಿಂಗಳ ಮೊದಲ ತೇದಿ ಈ ಊರಿನ ಮುಕ್ಕಾಲುವಾಲು ಜನ ಎಲ್ಲರೂ ರೇಷನ್‌ಕಾರ್ಡು ಹಣ ಎಲ್ಲವನ್ನೂ ಯಥಾಪ್ರಕಾರ ಒಪ್ಪಿಸಿದರು. ಅಷ್ಟು ನಂಬಿಕೆ ಅವನಲ್ಲಿ- ಜಾತಿ ಮತದ ಭೇದವಿಲ್ಲದೆ—ಹೆಂಗಸು ಗಂಡಸೆನ್ನದೆ - ಪತಿಸ್ತ್ರೀಯರು - ಅಪತಿಸ್ತ್ರೀಯರೆನ್ನದೆ - ಹುಡುಗರು ಮುದುಕರು ಎನ್ನದೆ—ಜನಬಾಹುಳ್ಯದ ಶೇಕಡಾಗಳಿಲ್ಲದೆ - ಆ ಕೆಲಸ ಈ ಕೆಲಸ ಎನ್ನದೆ—ಎಲ್ಲರೂ ಇವನ ಕಕ್ಷಿಗಾರರೇ ಆಗಿದ್ದರಂತೆ - ಬಹುಜನರಿಗೆ ಅನ್ನದಾತನೇ ಆಗಿದ್ದನಂತೆ.

ಅಧಿಕಮಾಸದ ಮೂರನೆಯ ತಾರೀಖು ಜೋಳಿಗೆ ಮನೆಗಳಿಗೆ ಬರಲೇ ಇಲ್ಲ. 'ಏನಾಯ್ತು' ಎಂದರು ಒಬ್ಬರು. 'ವಿನಾಶ' ಎಂದರು ಇನ್ನೊಬ್ಬರು. ಜೋಳಿಗೆ ಗೈರು ಹಾಜರು ಎಂದರು ಮೂರನೆಯವರು. ಹೋಟಲನ್ನು ಇದರ ಸಹಾಯದಿಂದಲೇ ನಡೆಸುತ್ತಿದ್ದ ಶಂಭುಶೇಠರು ಬೋಲ ಬೋಲ ಹುಯ್ದರು. ಚೊಂಬು ತಟ್ಟುವ ಬಾಹುಬಲಯ್ಯನವರು ಹಿಮ್ಮೇಳ ಕಟ್ಟಿದರು. ಚಟ್ಟಣಿಪುಡಿಯ ಕಾರ್ಖಾನೆಯ ಅಧ್ಯಕ್ಷ 'ಸಾಕಪ್ಪಾ' ಸಾಕು ಈ ಜೋಳಿಗೆ ಸಹಾಯ! ಎಂದು ಬಾರಿಸಿದರು. ಜ್ಞಾನಿ ವಿಜ್ಞಾನಿಗಳೆಲ್ಲರೂ ಶಂಖದ ಮೈಮೇಲೆ ಕೈಯಾಡಿಸಲಾರಂಭಿಸಿದರು, ಬಾಯಿಗಿಡುವಮುನ್ನ.

ಬುದ್ಧಿವಂತರು ಕೆಲವರು ಕಳಕೊಂಡು ಹುಡುಕಲೇ ಇಲ್ಲ—ಹೇಳಿಕೊಳ್ಳಲೇ ಇಲ್ಲ—ತಮ್ಮ 'ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದ ಸಂಜೀಗೋಪಾಳನನ್ನು ಕಾಣದೇ ಇದ್ದವರು ಕೆಲವರು, 'ಅಯ್ಯಯ್ಯೋ' ಎಂದು ಕೂಗಿಯೇ ಬಿಟ್ಟರು.

ಎಲ್ಲರೂ ಸೇರಿ ಅವನನ್ನು ಹಿಡಿದರು ಏನಯ್ಯಾ! ಅಂದರು- ನಾನೇನು ಮಾಡಲಿ ಸ್ವಾಮಿ, ನನ್ನ ಜೋಳಿಗೆ ಖಾಲಿ ಅಷ್ಟೆ. ಇದ್ದುದನ್ನು ಎಲ್ಲರಿಗೂ ಯಾವಾಗಿನಂತೆಯೇ ಹಂಚುತ್ತೇನೆ ಎಂದರು ನ್ಯಾಯವಾದುದೇ ಎನ್ನಿಸಿತು. ಎಲ್ಲರಿಗೂ—

ಈಗ ಊರಿಗೆ ಊರೇ ಸಂಜೆ ಗೋಪಾಳ ಎತ್ತುವ ಹಾಗಾಗಿದೆಯಂತೆ— ಹೊಟ್ಟೆಪಾಡಿಗಾಗಿ—

ಅನ್ನದಾತನೇನೋ ಖುಷೀ ಭವನೇ— —ಹೋಟಲಯ್ಯ.



ಏನ್ರೀ ನೀವು—ಒಂದುಮೂಟೆ ಇದ್ದಿಲು ತರೋಕಾಗುಲ್ಲ ಅಂತೀರಿ—
ನಾನು ಗಂಡಸಾಗಿರಬೇಕಾಗಿತ್ತು !

ನಮ್ಮ ಜೈಲಿನಲ್ಲಿ, ಅಧಿಕಾರಿಗಳು, ಹಾರ್ಮೋನಿಯಮ್ಮನ್ನು ಸರಬರಾಜು ಮಾಡಿದ್ದಾರಂತೆ- ನಿವಾಸಿಗಳ ಮನರಂಜನೆಗೆಂದು—

—ಅದಕ್ಕೇ ಇರಬೇಕು ನಮ್ಮೂರಿನಲ್ಲಿ ಅಪರಾಧಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು.

★ ★ ★

ಪಾಕೀಸ್ಥಾನವು ನ್ಯಾಯ ಎಂದು ಹೋರಾಡಿದ ಶ್ರೀ ಅಂಬೇಡ್ಕರ್ ಅವರು ರಾಜ್ಯಾಂಗ ರಚನಾಸಮಿತಿಯಲ್ಲಿ ಇನ್ನುಮುಂದೆ ಎಂದಾದರೂ ಅಖಂಡಭಾರತ ಆಗಿಯೇ ಆಗುತ್ತದೆ ಎಂದು ಸಾರಿದರಂತೆ—

—ಹೊಲಗೇರಿಯಿಂದ ಹೊರಗೆ ಹಾಕಿದರೆ ಇನ್ನೇನು ತಾನೆ ಮಾಡಿಯಾನು ?

★ ★ ★

ಆಗ—ಈಗ

........ಏನುಮಾಡಿದರೆ ಏನ್ರಿ ? ಕೇಳೋರು ಯಾರ್ರಿ ? ಎಷ್ಟು ದುಡಿದರೆ ಏನ್ರಿ, ಅಯ್ಯೋ ಅನ್ನೋರು ಯಾರ್ರಿ ? ಎಲ್ಲಾ ಗುಸಗುಸ ಅಂತಾ, ಒಳೊಳಗೆ ತಮತಮಗೆ ಮಾಡಿಕೋತಾರೆ. ನಮ್ಮೊರಗೂ ಅವೆಲ್ಲಾ ಬರೋದೇ ಇಲ್ಲಾ ಕಣ್ರಿ. ನಾನೂ ನೋಡಿ ಹದಿನೆಂಟು ವರ್ಷದಿಂದ ಮುನಿಸಿಪಾಲಿಟಿಗೋಸ್ಕರ ದುಡೀತಿದೀನಿ. ಡಿಸ್ಟ್ರಿಕ್ಟ್ ಬೋರ್ಡು, ಈ ಕಮಿಟಿ, ಆ ಕಮಿಟೀಲಿ ಮೊದಲಿಂದಾ ಇದೀವಿ. ಅಳಿಲುಸೇವೆ ಅಂದಹಾಗೆ ಅದಕ್ಕಿದಕ್ಕೆ ಕೈಲಾದ ಸಹಾಯ ಮಾಡ್ತಿದೀನಿ. ಯಾರು ಪಟ್ಟೆ ತಂದು ಮುಂದ್ಹಿಡದ್ರೂ ನಾಸ್ತಿ ಅನ್ನೊಲ್ಲ. ಎಷ್ಟೇ ಮಾಡಿದ್ರೂ, ಸಮಾಜಕ್ಕೇಂತ ದೇಹ ತೆಯಿದ್ರೂ ಬದಿಕಿದೀಯಾ ಸತ್ತಿದೀಯಾ ಅಂತ ಕೇಳೋರಿಲ್ಲ. ಬಿರುದು ಹಾಗಿರಲಿ, ಕಡೇಗೆ ಒಂದು ಪಬ್ಲಿಕ್ ಸರ್ವೀಸ್ ಮೆಡ್ಲೂ ಬೇಡ್ವೆ. ಹಿತ್ತಾಳೆದಕ್ಕೆ ಚಿನ್ನದ ಮುಲಾಮು ಮಾಡಿಸಿದ್ದು ಕೊನೇಗೇ.. .. ..

('ಸಮಾಜೋದ್ಧಾರಕ' ಎಂಬ ಬಿರುದನ್ನು ಸಂಪಾದಿಸಿ, ತಮ್ಮನ್ನು ಗೌರವಿಸಲು ಕರೆದ ಸಭೆಯಲ್ಲಿ ,ಭಾಷಣ ಮಾಡುತ್ತಾ) ......ಈ ಪ್ರಶಸ್ತಿಯನ್ನು ಪಡೆಯಲು ನನಗೆ ಅರ್ಹತೆ ಎಲ್ಲಿಂದ ಬಂತೆಂದು ನಿನ್ನೆಯಿಂದಾ ಯೋಚಿಸುತ್ತಿದ್ದರೂ ಸಮಸ್ಯೆ ಬಗೆ ಹರಿಯಲಿಲ್ಲ. ಈ ಮರ್ಯಾದೆ ನನಗಲ್ಲಾ, ತಮ್ಮಗಳೆಲ್ಲರಿಗೂ ಸೇರಿದ್ದು ಎಂಬುದು ಮಾತ್ರ ಧೃಡವಾಗಿ ಹೇಳಬಲ್ಲೆ. ನಾನು ಅಲ್ಪ, ಬಡಪಾಯಿ : ತಮ್ಮಗಳ ಪ್ರಭಾವದಿಂದ ಪೌರಸಭೆ, ನಾನಾಸಮಿತಿಗಳಲ್ಲಿ ಸದಸ್ಯನಾಗಿದ್ದೇನೆ. ಸಂಸ್ಥೆಗಳು ಒಂದೆರಡಕ್ಕೆ ಒಂದು ಮೂರುಕಾಸಿನ ಸಹಾಯ ಮಾಡಿದ್ದರೂ ಮಾಡಿರಬಹುದು. ಇಷ್ಟಕ್ಕೇ ಪ್ರಭುಗಳು ಇಷ್ಟು ದೊಡ್ಡ ಮರ್ಯಾದೆ ಮಾಡ್ತಾರೆ ಅಂತ ನಾನು ಕನಸಿನಲ್ಲೂ ಖಂಡಿತ ಕಂಡಿರಲಿಲ್ಲ .....

—ದೇವಗಿರಿ.

ಆಹ್ವಾನ ಪತ್ರಿಕೆ

[ರೇಷನ್ ಅಭಾವದಿಂದ ಜನಗಣತಿ, ತನಿಕೆ ನಡಿಸಬೇಕೆಂದು, ತನಿಕೆ ದಿನ ನಿಗದಿ ಮಾಡಿದ್ದರು—ಈ ಶುಭದಿನಕ್ಕೆ ತಾವುಗಳು ಸಕುಟುಂಬ ಸಪರಿವಾರ ಸಮೇತರಾಗಿ ೨ ದಿನ ಮುಂಚಿತವಾಗಿ ದಯಮಾಡಿಸಿ 'ನಮ್ಮ ಮನಸ್ಸಂತೋಷಪಡಿಸಬೇಕೆಂದು—ಕೋರುವ—ಎಂಬ ಲಗ್ನ ಆಹ್ವಾನಪತ್ರಿಕೆ ಹೊರಗಿನ ಬಂಧು ಮಿತ್ರರಿಗೆ ೮ ದಿನ ಮುಂಚಿತವಾಗಿಯೇ ತಲಪಿತ್ತು, ಸರಿ 'ಸ್ವಕಾರ್ಯ, ಸ್ವಾಮಿಕಾರ್ಯ' ಜರಗಲೆಂದೇ ಬೆಂಗಳೂರಿನಲ್ಲಿ ಜಾತ್ರೆ ಸೇರಿತು.]

* * *

ಇವತ್ತಿನ ಗಾದೆಗಳು

ಚಿನ್ನಡಿ ಒಳಗಿನ ಗಂಟು
ಸಿಕ್ಷರ ಮುಂದೆ ಜಾರಿಸಿದ ಹಾಗೆ
ಒಳಗೆ ಬಾರೊ, ತಮ್ಮಾ, ಅಂದ್ರೆ, ನೀನಿರುವ ರೂಮಿಗೆ ಬೀಗ ಹಾಕಿಕೊ
ಅನ್ನೋದೆ?

ಅಸಾಮುನ್ನು ಕೇಳದೆ, ಮಸಾಲೆ ಅರೆಯುತ್ತಾರೆಯೇ?
ಸತ್ತವರೆಷ್ಟು, ಅಂದ್ರೆ, ಬಂಗಾಳದಲ್ಲೊ? ಬಿಹಾರದಲ್ಲೊ?
ಬೂಟಾಟಕೆ ಬ್ರಿಟನ್ನು, ಹಾಕಿದ್ದೆಲ್ಲ ನಾವು.
ಬಂಗಾಳಕ್ಕೆ ಜ್ವರ ಬಂದರೆ, ಬಿಹಾರಿಗೆ ಬರೆ ಹಾಕೋದೆ?
ಚರ್ಚಿಲ್ ಮುಪ್ಪಾದರೂ, ಹುಳಿ ಹಿಂಡುವುದು ತಪ್ಪುವುದೆ?
ಚಿನ್ನದ ಸೂಜಿ ಅಂತ ಕಣ್ಣಿಗೆ ಚುಚ್ಚಿಕೊಳ್ಳೋದೆ?



"ಮದರಾಸಿನಲ್ಲಿ ಬಟ್ಟೆ ಅಭಾವ ನಮಗಿಂತ ಜಾಸ್ತಿಯಂತೆ!"

ಭೀಕರ, ಇರಿತ

ಅಂದು ಭಾನುವಾರ. ಸಾಯಂಕಾಲ ಆರುಗಂಟೆಯ ಹೊತ್ತಿಗೆ ನಾನೂ ನನ್ನ 'ಪ್ರಿಯವಾದ' ಸ್ನೇಹಿತಳೂ ಕೈಮೇಲೆ ಕೈ ಹಾಕಿಕೊಂಡು ವಾಯು ವಿಹಾರಕ್ಕೆಂದು ಹೊರಟೆವು. ನಾನು ನನ್ನ ಸ್ನೇಹಿತಳೂ ಬಲು ಅನ್ಯೋನ್ಯ. ನಾನು ಹೋದಲ್ಲೇ ಅವಳೂ ಬರುವಳು. ಕೈಮೇಲೆ ಕೈ ಇರಲಿ, ಪಾದದಮೇಲೆ ಕಾಲು ಹಾಕಿಕೊಂಡೇ ಹೋಗುತ್ತಿದ್ದೆವು ಮುಖ್ಯ! ಕತ್ತಲಲ್ಲಿ ನನ್ನ ಹಾದಿಯನ್ನು ಅವಳು ಬೆಳಗುತ್ತಿದ್ದಳು. ಅವಳನ್ನು ನಾನು ಹಾದಿಕಾಣಿಸುತ್ತಿದ್ದೆ. ಅಷ್ಟು ಪರಸ್ಪರ ಒಬ್ಬರಿಗೊಬ್ಬರು ನಾವು,

ಬಳೇಪೇಟೆ ಹತ್ತಿರಕ್ಕೆ ಬಂದೆವು - ಕಾಲುಬಳೇ ಪೇಟೆ ಹತ್ತಿರಕ್ಕೆ - ಅಲ್ಲೇ ಮೂರು ದಿನದ ಹಿಂದೆ ಒಂದು ಚೂರಿ ಇರಿತದ ಪ್ರಕರಣ ನಡೆದು ಹೋಗಿದ್ದು— ಎರಡು ದಿನದ ಹಿಂದೆ ಒಂದು ಆಸಾಮಿಯನ್ನು ಮನೆ ಬಾಗಿಲ ಬಳಿಯೇ ಎತ್ತಿ ಕೊಂಡು ಹೋಗಿಬಿಟ್ಟಿದ್ದರು ಕಳ್ಳರು—ಹಿಂದಿನ ದಿವಸ ಎಲ್ಲರೆದುರಿಗೆ ಒಬ್ಬನ ಕಾಲ ಕೆಳಗೆ ಚೂರು ಗಾಜನ್ನು ಎಸೆದಿದ್ದರು.

ಅಂದು ಅಲ್ಲಿ ಹೋಗುವಾಗ ಸ್ವಲ್ಪ ನಿಧಾನವಾಗಿಯೇ ನಾನೂ ನನ್ನ ಸ್ನೇಹಿ ತೆಯೂ 'ಪೊರವೊಡು'ತ್ತಿದ್ದೆವು. ಒಬ್ಬರ ಪಕ್ಕದಲ್ಲಿ ಒಬ್ಬರು—

ಜನಜಂಗುಳಿ ಹೆಚ್ಚಾಯಿತು. ಅಷ್ಟರಲ್ಲೇ ನನ್ನ ಪಕ್ಕದಲ್ಲಿ 'ರಪಾರ್' ಎಂಬ ಶಬ್ದವಾಯಿತು. ಏಕೆ? ಏನಾಯ್ತು? ಎನ್ನುವಷ್ಟರಲ್ಲೇ ನನ್ನ ಸ್ನೇಹಿತೆ ನಿಟ್ಟುಸಿರು ಬಿಟ್ಟಿದ್ದಳು. ಅವಳ ಉಸಿರೇ ಹಾರಿ ಹೋಗಿತ್ತು. ಪಾಪಿಮಯ ಪ್ರಪಂಚ! ಯಾರೊಬ್ಬರೂ ನನ್ನ ಸಹಾಯಕ್ಕೆ ಬರಲೊಲ್ಲರು. ಹಾದಿಯಲ್ಲಿದ್ದ ಇಬ್ಬರು ಮೂರು ಚಿಕ್ಕ ಹುಡುಗರು ಕೇಕೆ ಹಾಕಿ ನಗುತ್ತಿದ್ದರು.

ಕೈಲಾದ ಚಿಕಿತ್ಸೆಮಾಡಿಯೇ ಬಿಡೋಣ ಕಾಯಕಲ್ಪ ಮಾಡಲಾದರೆ ನೋಡಿಯೇ ಬಿಡೋಣ ಎಂದು ಅವಳ ಹೆಣಭಾರವನ್ನೂ ತಳ್ಳಿಕೊಂಡೇ ಹತ್ತಿರ ಕಂಡ ಚಿಕಿತ್ಸಾಲಯಕ್ಕೆ ಕೊಂಡೊಯ್ದೆ.

ಯುನಾನಿ ಕಾಯಕಲ್ಪ ಪ್ರವೀಣ "ಪಾಂಚ್ ಲಾ, ಆ ರೇ ಆಹ ರೋ ಸಾಮಿಾ- 'ದೇಕ್ತಾ' ಎಂದ,


ನನ್ನ 'ಪ್ರಿಯ'ಳ ಕರುಳು ಕಿತ್ತಿಟ್ಟ. ತನ್ನ ಪ್ರಯೋಗವನ್ನೆಲ್ಲಾ ಮಾಡಿದ ಉಸಿರು ಕಟ್ಟಿ ಇವಳಿಗೆ ಜೀವದುಸಿರು ತುಂಬಿದ 'ಅಭ್ ಠೀಕ್ ಹೈ' ಎಂದ

ಈಕೆ ಆಗಲೇ ನವಚೈತನ್ಯದಿಂದ ತುಂಬಿತುಳುಕಾಡುತ್ತಿದ್ದಳು-

ನನಗೋ ಬಲು ಖುಷಿ ಆಯಿತು ಯುನಾನಿ, ಕಾಯಕಲ್ಪಿಗೆ ನಾಲ್ಕಾಣೆ ಕೊಟ್ಟೆ. ನನ್ನ ಸ್ನೇಹಿತೆಯ ಮುಖಕ್ಕೆ ಮಂಗಳಾರತಿ ಕಟ್ಟಿದೆ.

ನಂತರ ಆ ಹೆಣ್ಣು ಬಿ. ಎಸ್. ಎ. ಸೈಕಲನೊಡನೆ ಮನೆಗೆ ವೇಗವಾಗಿ ಬಂದೆ-

—ಮಾರಣ್ಣ.



ಸಂಪುಟ ೫ } ಫೆಬ್ರವರಿ ೧೯೪೭ { ಸಂಚಿಕೆ ೧೧

ಕುಹಕಿಡಿಗಳು

—o—

ಮಹಾತ್ಮರು ನೌಖಾಲಿಯ ಕಾಲ್ನಡಿಗೆ ಯಾತ್ರೆಯನ್ನು ಮಾಡುತ್ತಿದ್ದಾರೆ.

—ಅಂದರೆ ಬೀಹಾರಿನಲ್ಲಿ ಲೀಗ್ ಮುಂದಾಳುಗಳು ಹೇ - ಹೇ - ಹ್ಯಗೆ ಹೋಗುತ್ತಾರೆ ?

* * * *

ಸದ್ಯ ! ನಾನು ' ಓಟು ' ಮಾಡಲಿಲ್ಲಪ್ಪಾ !

ಈಗ ಆ ಸಭೆಯಲ್ಲಿ ಆಗುವಗೊಂದಲಕ್ಕೆ ನಾನು ಸಹಕಾರಿಯಲ್ಲ ಎಂದೆನ್ನಿಸುವುದು ಎಷ್ಟೋ ಹಿತವಾಗಿದೆ ಮನಸ್ಸಿಗೆ—(ಓಟುಗರ ವತ್ರದಿಂದ)

* * * *

ಸ್ತ್ರೀಯರ ವಿಚಾರ ನನಗೆ ಹೇಳಿಕೊಡುಕ್ಕೆ ಬರುತ್ತೀಯಾ —ಪೆಂಗೇ— ನಾನು ಅವರಲ್ಲೊಬ್ಬಳನ್ನು ಕೈಹಿಡಿದಿದ್ದೇನೆ ಕಣೋ ? — (ಒಬ್ಬ ವಿವಾಹಾಧಾರಿ ಇನ್ನೊಬ್ಬನಿಗೆ)

* * * *

ಏನ್ ಸಾಹೇಬ್ರೇ ! ಈ ಕಿತ್ತಳೇ ಹಣ್ಣು ಕೊಡಗಿನಿಂದ ನೀವೇ ತರಿಸಿದ್ದೋ ! ಅಥವಾ ಅಲ್ಲಿಂದ ಅದೇ ಗಡೀಪಾರಾಗಿ ಬಂದಿದ್ದೋ ?

* * * *